DISTRICT PANCHAYATH KASARAGOD

# EQUIP 2023

(Educational Quality Improvement Programme for class ten)

## QUESTION POOL



Student Support Material for Class Ten

## SOCIAL SCIENCE

Kannada Medium

DIET KASARAGOD

## EQUIP 2023


| | | |
|---|---|---|
| *Chief Editor* | : | **Dr. Raghurama Bhat K.**<br>Principal, DIET Kasaragod |
| *Editor* | : | **Madhusoodanan V.**<br>Lecturer, DIET Kasaragod |
| *Editorial Board* | : | **Gireesh Babu A.**<br>Lecturer, DIET Kasaragod |
| : | | **Ashoka M.**<br>Teacher Educator, DIET Kasaragod |
| ***Resource Team :*** | | |
| ***Social Science*** | : | **Jyothi Kumari A.**<br>GVHSS Karadka<br>**Abdul Basheer**<br>GFVHSS Cheruvathur<br>**Mineesh Babu**<br>GVHSS Iriyanni<br>**Biju M.**<br>GHSS Parappa<br>**Vijayan T.**<br>GMRHSS Kasaragod<br>**Aishah Binti Abdul Khader**<br>GHSS Thachangad<br>**Raghava M.N.**<br>GHSS Mogralputhur<br>**Sandeep B.S.**<br>GHSS Bandadka |
| *DTP Layout* | : | **GS Infotech**<br>Vidyanagar, Kasaragod. |



| | | |
|---|---|---|
| Prepared by | : | **DIET Kasaragod** |
| Printed & Published by | : | **District Panchayath, Kasaragod** |

# ಶುಭಾಶಯಗಳು



ವಿಕೇಂದ್ರೀಕೃತ ಯೋಜನೆ ಮತ್ತು ನಿರ್ವಹಣೆಗಳ ಮೂಲಕ ಕೇರಳದ ಆರೋಗ್ಯ ಮತ್ತು ಶೈಕ್ಷಣಿಕ ರಂಗಗಳನ್ನು ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನಕ್ಕೆ ತಲುಪಿಸಲು ನಮಗೆ ಸಾಧ್ಯವಾಗಿದೆ. ಈ ಹಿರಿಮೆಯನ್ನು ಸಾಧಿಸಲು ಪ್ರಾದೇಶಿಕ ಆಡಳಿತಾ ಸಂಸ್ಥೆಗಳು ನಡೆಸಿದ ಸೇವೆ ಸ್ತುತ್ಯಾರ್ಹ. ಕೋವಿಡ್ ಬಿಕ್ಕಟ್ಟು ತೀವ್ರವಾದಾಗ ಕೇರಳದ ಸಾರ್ವಜನಿಕ ಶಿಕ್ಷಣರಂಗ ನಿಶ್ಚಲವಾಗದೆ ಮುಂದುವರಿಯು ವಂತಾಗಲು ನಾವೆಲ್ಲಾ ಕೈಜೋಡಿಸಿ ಶ್ರಮಿಸಿದೆವು. ಆದರೂ ಔಪಚಾರಿಕ ಕಲಿಕಾ ಅನುಭವಗಳ ಅಭಾವ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಕಾ ಅಂತರ ಮತ್ತು ಕಲಿಕಾ ಅನುಭವಗಳ ನಷ್ಟವನ್ನುಂಟು ಮಾಡಿದೆ. ಈ ಸಮಸ್ಯೆಯನ್ನು ಪರಿಹರಿಸಲು ಕಾಸರಗೋಡು ಜಿಲ್ಲಾ ಪಂಚಾಯತಿನ ನೇತೃತ್ವದಲ್ಲಿ ಡಯಟ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿಯಾಗಿ ಕಾರ್ಯಗತಗೊಳಿಸುವ **EQUIP 2023** ಕಲಿಕಾ ಪೋಷಣ ಕಾರ್ಯಕ್ರಮಕ್ಕೆ ಎಲ್ಲಾ ಬೆಂಬಲವು ಇದೆ. ಹತ್ತು ವರ್ಷಗಳ ಕಲಿಕಾ ಚಟುವಟಿಕೆಗಳ ಹಿರಿಮೆಯ ಸಂಕೇತವಾಗಿರುವುದಾಗಿದೆ ಹತ್ತನೇ ತರಗತಿಯ ವಾರ್ಷಿಕ ಪರೀಕ್ಷೆ. ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಕಾ ಕಾಲಗಳಲ್ಲಿ ಗಳಿಸಿದ ಜ್ಞಾನದ ಸ್ಪಷ್ಟತೆಯೊಂದಿಗೆ ಪ್ರತಿಯೋರ್ವ ವಿದ್ಯಾರ್ಥಿಗೂ ಈ ಪರೀಕ್ಷೆ ಬರೆಯಲು ಸಾಧ್ಯವಾಗಬೇಕು. ಕೋವಿಡ್ ದುರಂತವು ಶಾಲಾ ಒಕ್ಕೂಟಗಳನ್ನು ಮಂಕಾಗಿಸಿದೆ. ವಿದ್ಯಾರ್ಥಿ ಜೀವನದಲ್ಲಿನ ಅತಿ ಪ್ರಧಾನ ಪರೀಕ್ಷೆಗಾಗಿ ತಯಾರಿಸಿದ ಪ್ರಶ್ನಾಸಂಗ್ರಹಕ್ಕೆ ಎಲ್ಲಾ ವಿಧದ ಶುಭಾಶಯಗಳನ್ನು ಹಾರೈಸುತ್ತಿದ್ದೇನೆ.


ಚೆನ್ನಾಗಿ ಕಲಿಯಿರಿ. ಪರೀಕ್ಷೆಯ ಆತ್ಮವಿಶ್ವಾಸದೊಂದಿಗೆ ಬರೆಯಿರಿ.

**ಶ್ರೀಮತಿ. ಬೇಬಿ ಬಾಲಕೃಷ್ಣನ್**

ಅಧ್ಯಕ್ಷರು

ಜಿಲ್ಲಾ ಪಂಚಾಯತು ಕಾಸರಗೋಡು

## ಶುಭಾಶಯಗಳು



ಕಾಸರಗೋಡು ಜಿಲ್ಲಾ ಪಂಚಾಯತಿನ ನೇತೃತ್ವದಲ್ಲಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಮಂಡಲವನ್ನು ಪ್ರಬಲಗೊಳಿಸಲು ಅನೇಕ ಚಟುವಟಿಕೆಗಳು ನಡೆದುಬರುತ್ತಿದೆ. ಕೋವಿಡ್–19 ನಮ್ಮೆಲ್ಲರ ಪರಿಶ್ರಮವನ್ನು ಹಿಮ್ಮೆಟ್ಟಲು ಒಂದು ಮಿತಿಯ ವರೆಗೆ ಕಾರಣವಾಯಿತು. ಆದರೂ ಅದನ್ನೆಲ್ಲಾ ಮೀರಿ ಸಾರ್ವಜನಿಕ ಶಿಕ್ಷಣವನ್ನು ಅಭೂತಪೂರ್ವ ಶಕ್ತಿಯೊಂದಿಗೆ ನಾವು ಮುಂದೆ ಸಾಗಿಸುತ್ತಿದ್ದೇವೆ. ಈ ವೇಳೆಯಲ್ಲಿ ಕಾಸರಗೋಡು ಜಿಲ್ಲಾ ಪಂಚಾಯತಿನ ನೇತೃತ್ವದಲ್ಲಿ ಜಿಲ್ಲಾ ಶೈಕ್ಷಣಿಕ ತರಬೇತಿ ಕೇಂದ್ರ (DIET) ಹತ್ತನೇ ತರಗತಿ ಮಕ್ಕಳ ಕಲಿಕೆಯ ಅಂತರವನ್ನು ಪರಿಹರಿಸಲು ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಲು ಅವರನ್ನು ಸಜ್ಜುಗೊಳಿಸುವುದಕ್ಕಾಗಿದೆ, ಈ ಕಲಿಕಾ ಪೋಷಣಾ ಸಾಮಗ್ರಿಯನ್ನು ತಯಾರಿಸುವುದು. ವಿದ್ಯಾರ್ಥಿಗಳ ಶೈಕ್ಷಣಿಕ ಹಿರಿಮೆಯನ್ನು ಖಾತರಿಪಡಿಸಿಕೊಂಡು ಉನ್ನತ ಗ್ರೇಡುಗಳನ್ನು ಗಳಿಸಲು ಅವರನ್ನು ಸಕ್ರಿಯಗೊಳಿಸಲು **EQUIP 2023** ಎಂಬ ಹೆಸರಲ್ಲಿ ಡಯಟ್ ಕಾಸರಗೋಡು ತಯಾರಿಸಿದ ಈ ಪದ್ಧತಿಗೆ ಸಾಧ್ಯವಾಗಲಿ ಎಂದು ಶುಭ ಹಾರೈಸುತ್ತಿದ್ದೇನೆ.

ಪ್ರೀತಿಯಿಂದ,

**ಅಡ್ವ. ಸರಿತ ಎಸ್.ಎನ್.**
ಆರೋಗ್ಯ– ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ
ಜಿಲ್ಲಾ ಪಂಚಾಯತ್, ಕಾಸರಗೋಡು

## ಶುಭಾಶಯಗಳು



ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಪಂಚಾಯತು ಮತ್ತು ಡಯಟ್‌ನ ಒಂದು ಪದ್ಧತಿಯಾಗಿದೆ EQUIP 2023. ಇಂಗ್ಲೀಷ್, ಗಣಿತ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ, ಸಮಾಜ ವಿಜ್ಞಾನ ಎಂಬೀ ವಿಷಯಗಳ ಪ್ರತಿಯೊಂದು ಯೂನಿಟ್‌ಗಳನ್ನು ಸಮಗ್ರವಾಗಿ ಕಂಡುಕೊಂಡು ಎಲ್ಲಾ ವಿಷಯಗಳನ್ನು ಸೇರಿಸಿಕೊಂಡು ತಯಾರಿಸಿರುವ ಸಾಮಗ್ರಿಯಾಗಿದೆ EQUIP.

ಉತ್ತರಗಳನ್ನು ಕಲಿಯುವುದರ ಬದಲು ಪ್ರಶ್ನೆಗಳಿಂದ ಉತ್ತರಕ್ಕೆ ತಲುಪಿ ಚಿಂತನಾಸಾಮರ್ಥ್ಯ ಮತ್ತು ರಚನಾ ಸಾಮರ್ಥ್ಯಗಳನ್ನು ಪರಿಪೋಷಿಸಿ ಪಾಠಭಾಗದ ಆಶಯವನ್ನು ಅರ್ಥ ಮಾಡುವುದು ಎಂಬ ರೀತಿಯಾಗಿದೆ EQUIP 2023.

ವಿದ್ಯಾಲಯಗಳಲ್ಲಿ ಸಂಪನ್ಮೂಲ ಅಧ್ಯಾಪಕರು ನೀಡುವ ನಿರ್ದೇಶಗಳಿಂದ ಕೊರೋನ ಕಾಲದ ಕಲಿಕಾ ಅಂತರ ಅನುಭವಿಸಿದ ಒಂದು ಬ್ಯಾಚಿಗೆ ಅಗತ್ಯವಿರುವ ಸಹಾಯಗಳನ್ನು EQUIP 2023 ನೀಡಲು ಸಾಧ್ಯವಾಗುವುದು. ಈ ಕಲಿಕಾ ಸಾಮಗ್ರಿ ಜಿಲ್ಲೆಯ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಫಲಿತಾಂಶಕ್ಕಿರುವ ಮೆಟ್ಟಿಲು ಆಗಲಿ ಎಂದು ಹಾರೈಸುತ್ತೇನೆ. ಜಿಲ್ಲಾ ಪಂಚಾಯತು ಮತ್ತು ಡಯಟ್‌ನ ಈ ಪದ್ಧತಿಗೆ ಎಲ್ಲಾ ಶುಭಾಶಯಗಳನ್ನು ಕೋರುತ್ತೇನೆ.

ಶುಭಾಶಯಗಳೊಂದಿಗೆ,

**ವಾಸು ಸಿ.ಕೆ.**

ಜಿಲ್ಲಾ ಶಿಕ್ಷಣ ಉಪನಿರ್ದೇಶಕರು

ಕಾಸರಗೋಡು.

# ಮುನ್ನುಡಿ



ಜಿಲ್ಲೆಯ ಶಿಕ್ಷಣ ಚಟುವಟಿಕೆಗಳನ್ನು ಸಂಯೋಜಿಸಿ ಕೊಂಡೊಯ್ಯುವ ಕರ್ತವ್ಯಗಳನ್ನು ಜಿಲ್ಲಾ ಶೈಕ್ಷಣಿಕ ತರಬೇತಿ ಕೇಂದ್ರವಾದ DIET ಹಿಂದಿನಿಂದಲೇ ಮಾಡುತ್ತಾ ಬರುತ್ತಿದೆ. ಮಾನವ ಸಂಪನ್ಮೂಲದ ಪರಿಮಿತಿ ಇರುವಾಗಲೇ ಪ್ರೀಪ್ರೈಮರಿ ಹಂತದಿಂದ ಹೈಯರಿ ಸೆಕಂಡರಿ ಹಂತದವರೆಗೆ ವಿವಿಧ ಪದ್ಧತಿಗಳನ್ನು ಯೋಜಿಸಲು ಮತ್ತು ನಿರ್ವಹಿಸಲು ಡಯಟ್‌ಗೆ ಈವರೆಗೆ ಸಾಧ್ಯವಾಗಿದೆ. ಹತ್ತನೇ ತರಗತಿ ಮಕ್ಕಳ ಕಲಿಕಾ ಸಮಸ್ಯೆಗಳನ್ನು  ಪರಿಹರಿಸಲು ಕೆಲವು ವರ್ಷಗಳಿಂದ ಕಾಸರಗೋಡು ಡಯಟ್ ಜಾರಿಗೊಳಿಸುತ್ತಿರುವ ಪದ್ಧತಿಯಾಗಿದೆ EQUIP 2023.

ಕೆಲವು ವರ್ಷಗಳಿಂದ ಮಕ್ಕಳ ಕಲಿಕಾ ಸಮಸ್ಯೆಗಳನ್ನು ಪರಿಗಣಿಸಿಯಾಗಿದೆ ಚಟುವಟಿಕೆಗಳನ್ನು ಆಯೋಜಿಸಿರುವುದು. ಈ ಪದ್ಧತಿಯ ಉದ್ದೇಶವು ಹತ್ತನೇ ತರಗತಿಯ ವಿವಿಧ ವಿಷಯಗಳ ಮಾದರಿ ಪ್ರಶ್ನೆಗಳನ್ನು ಪರಿಚಯಿಸುವುದಾಗಿದೆ. ಜಿಲ್ಲಾ ಪಂಚಾಯತಿನ ಸಹಾಯದಿಂದ ಮಲೆಯಾಳದಲ್ಲೂ, ಇಂಗ್ಲೀಷಲ್ಲೂ, ಕನ್ನಡದಲ್ಲೂ ಪುಸ್ತಕಗಳನ್ನು ಮುದ್ರಿಸಿ ಪ್ರತಿಯೊಂದು ಮಾಧ್ಯಮದಲ್ಲೂ ಒಂದೊಂದು ಪ್ರತಿಯನ್ನು ಶಾಲೆಗಳಿಗೆ ನೀಡಲು ಉದ್ದೇಶಿಸುವುದು. ಈ ವರ್ಷ ಹತ್ತನೇ ತರಗತಿಯ ಪರೀಕ್ಷೆ ಬರೆಯುವಂತಹ ಎಲ್ಲಾ ವಿದ್ಯಾರ್ಥಿಗಳಿಗೂ ಇದರ ಪ್ರಯೋಜನ ಲಭಿಸಬಹುದೆಂಬ ನಿರೀಕ್ಷೆಯಿದೆ. ವ್ಯತ್ಯಸ್ತ ಕಲಿಕಾ ಪ್ರತಿಭೆ ಹೊಂದಿರುವ ಎಲ್ಲಾ ವಿಭಾಗ ಮಕ್ಕಳಿಗೂ ಈ ಸಾಮಗ್ರಿ ಪ್ರಯೋಜನವಾಗಲಿ ಎಂದು ಹಾರೈಸುತ್ತೇನೆ.

ಶುಭಾಶಯಗಳೊಂದಿಗೆ,

**ಡಾ. ರಘುರಾಮ ಭಟ್ ಕೆ.**

ಪ್ರಾಂಶುಪಾಲರು

ಡಯೆಟ್ ಕಾಸರಗೋಡು

# ಸಮಾಜ ವಿಜ್ಞಾನ
# SOCIAL SCIENCE

EQUIP - DIET KASARAGOD
**QUESTION POOL - 2023**

# ಸಮಾಜ ವಿಜ್ಞಾನ (SOCIAL SCIENCE)

**1 ಅಂಕೆಯ ಪ್ರಶ್ನೆಗಳು**

1. ಭಾರತದ ಮೊತ್ತಮೊದಲ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದವರು ಯಾರು?
(ಪಂಡಿತ್ ರಮಾಬಾಯಿ, ಡಿ.ಕೆ. ಕಾರ್ವೆ, ರವೀಂದ್ರನಾಥ ಠಾಗೋರ್, ಡಾ. ಸಕೀರ್ ಹುಸೈನ್)
2. ಮೌಂಟ್ K2 ನೆಲೆಗೊಂಡಿರುವುದು ಯಾವ ಪರ್ವತ ಶ್ರೇಣಿಯಲ್ಲಾಗಿದೆ?
(ಕಾರಕೋರಂ, ಕಾಂಚನ ಜಂಗ, ಲಡಾಖ್, ಸಸ್ಕರ್)
3. ರಬ್ಬರ್ ಕೃಷಿಗೆ ಅನುಕೂಲಕರವಾದ ಮಣ್ಣು ಯಾವುದು?
(ಪರ್ವತ ಮಣ್ಣು, ಕಪ್ಪು ಮಣ್ಣು, ಕೆಂಪು ಮಣ್ಣು, ಮುರಕಲ್ಲು ಮಣ್ಣು)
4. ಕೆಳಗೆ ಹೇಳಿರುವವುಗಳಲ್ಲಿ ಋತುಭೇದಗಳಿಗೆ ಕಾರಣವಾಗದ ಘಟಕಗಳು ಯಾವುವು?
(ಭೂಮಿಯ ಪರಿಕ್ರಮಣ, ಅಕ್ಷದ ವಾಲುವಿಕೆ, ಅಕ್ಷದ ಸಮನಾಂತರತೆ, ಭೂಮಿಯ ಭ್ರಮಣ)
5. ಸ್ಥಳ ಸರೂಪ ಭೂಪಟಗಳಲ್ಲಿ ಪೂರ್ವಕ್ಕೆ ಹೋದಂತೆ ಮೌಲ್ಯ ಹೆಚ್ಚಾಗುವ ರೇಖೆಗಳು ಯಾವುವು?
(ಕೊಂಟೂರ್ ರೇಖೆ, ಈಸ್ಟಿಂಗ್ಸ್, ನೋರ್ಥಿಂಗ್ಸ್, ಕೊಂಟೂರ್ ಅಂತರ)
6. ಮಾನವನಿಗೆ ಕೆಲವು ಮೂಲಭೂತ ಹಕ್ಕುಗಳಿವೆ. ಅವುಗಳನ್ನು ನಿಷೇಧಿಸಲು ಯಾವುದೇ ಸರಕಾರಕ್ಕೂ ಹಕ್ಕಿಲ್ಲ. ಇದು ಯಾರ ಆಶಯವಾಗಿದೆ?
(ಥೋಮಸ್ ಪೈನ್, ಥೋಮಸ್ ಜೆಫರ್ಸನ್, ಜೇಮ್ಸ್ ಮಾಡಿಸ್, ಜೋನ್ ಲೋಕ್)
7. ಹಿಮಾ ಭಕ್ಷಕ ಎಂಬ ಅರ್ಥವಿರುವ ಪ್ರಾದೇಶಿಕ ಮಾರುತ ಯಾವುದು?
(ಚಿನೂಕು, ಪೋಹ್ನು, ಕಾಲಬೈಶಾಕಿ, ಲೂ)
8. ಕೆಳಗೆ ನೀಡಿರುವವುಗಳಲ್ಲಿ ಸ್ಥಳೀಯ ಆಡಳಿತ ಸರ್ಕಾರಗಳು ಹೊರಿಸುವ ತೆರಿಗೆ ಯಾವುದು?
(ಕಾರ್ಪೊರೇಟ್ ತೆರಿಗೆ, ಭೂ ತೆರಿಗೆ, ವಿನೋದ ತೆರಿಗೆ, ಮೌಲ್ಯವರ್ಧಿತ ತೆರಿಗೆ)
9. ಭಾರತದಲ್ಲಿ ಅತಿ ದೊಡ್ಡ ಕಲ್ಲಿದ್ದಲಿನ ಗನಿ ಇರುವ ಸ್ಥಳ ಯಾವುದು?
(ನೈವೇಲಿ, ಝರಿಯಾ, ಡಿಗ್ ಬೋಯಿ, ಸುಂದರ ಗಢ)
10. ಸ್ಥಳ ಸ್ವರೂಪ ಭೂಪಟಗಳ ಪ್ರಾಥಮಿಕ ಮಾಹಿತಿಗಳಲ್ಲಿ ಒಳಗೊಳ್ಳದ್ದು ಯಾವುದು?
(ಭೂಪಟದ ಅಳತೆ, ಕೋಂಟೂರು ಅಂತರ, ಜಲಾಶಯ, ಈಸ್ಟಿಂಗ್ಸ್)
11. ಕೆಳಗೆ ನೀಡಿರುವವುಗಳಲ್ಲಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಿಂದ ಉದ್ಭವಿಸುವ ನದಿ ಯಾವುದು?
(ಕೃಷ್ಣ, ಮಹಾನದಿ, ಗೋದಾವರಿ, ನರ್ಮದಾ)
12. ಭಾರತದಲ್ಲಿ ಸ್ಥಳಸ್ವರೂಪ ಭೂಪಟ ತಯಾರಿಯ ಜವಾಬ್ದಾರಿ ಹೊಂದಿದ ಸಂಸ್ಥೆ ಯಾವುದು?
(ರಿಮೋಟ್ ಸೆನ್ಸಿಂಗ್ ಸೆಂಟರ್, ಸರ್ವೇ ಆಫ್ ಇಂಡಿಯಾ, ಇಂಡಿಯನ್ ರೀಜಿನಲ್ ನಾವಿಗೇಷನ್, ಸ್ಯಾಟಲೈಟ್ ಸಿಸ್ಟಂ)

13. ಪ್ರಧಾನ ರೇಖಾಂಶ ಎಂದು ತಿಳಿಯಲ್ಪಡುವ ರೇಖೆ ಯಾವುದು?
($0^0$ ರೇಖಾಂಶ ರೇಖೆ, $180^0$ ರೇಖಾಂಶ ರೇಖೆ, 82½ ರೇಖಾಂಶ ರೇಖೆ, $120^0$ ರೇಖಾಂಶ ರೇಖೆ)

14. ಅಲಿಪ್ತ ಚಳುವಳಿಯ ಪ್ರಥಮ ಸಮ್ಮೇಳನ ನಡೆದ ಸ್ಥಳ ಯಾವುದು?
(ಬಾಂಡುಂಗಿ, ಯುಗಸ್ಲೋವಾಕಿಯಾ, ಬೆಲ್‌ಗ್ರೇಡ್, ಇಂಡೋನೇಷ್ಯಾ)

15. ಭಾರತ ಉಡ್ಡಯಿಸಿದ ಉಪಗ್ರಹಗಳಲ್ಲಿ ಯಾವ ಶ್ರೇಣಿಯ ಉಪಗ್ರಹಗಳಾಗಿವೆ ಭೂಸ್ಥಿರ ಉಪಗ್ರಹಗಳು?
(ಇನ್ಸಾಟ್, IRS, IRNSS, QIS)

16. ಕೆಳಗೆ ನೀಡಿರುವವುಗಳಲ್ಲಿ ದೇಶೀಯ ರಾಜ್ಯಗಳ ವಿಲಿನೀಕರಣ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿದ ದೇಶೀಯ ರಾಜ್ಯ ಯಾವುದು?
(ಹೈದರಾಬಾದ್, ಔಧ್, ಝಾನ್ಸಿ, ನಾಗಪುರ)

17. ಕೋಟನೋ ಪೊಲಿಸ್ ಎಂದು ತಿಳಿಯಲ್ಪಡುವ ನಗರ ಯಾವುದು?
(ಕಾಂಡ್ಲ, ಕೋಲ್ಕತ್ತ, ಮುಂಬೈ, ಅಹಮ್ಮದಾಬಾದ್)

18. ಭೂಮಿಯ ಅಕ್ಷಕ್ಕೆ ಪರಿಕ್ರಮಣ ತಲದಿಂದಿರುವ ವಾಲುವಿಕೆ ಎಷ್ಟು?
($23½^0$ , $66½^0$ , $82½^0$ , $0^0$)

19. ಹತ್ತಿರದ ಎರಡು ಕೋಂಟೂರು ರೇಖೆಗಳ ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಏನೆಂದು ಕರೆಯುತ್ತಾರೆ ?
(ಕೋಂಟೂರು ಮೌಲ್ಯ, ಫೋಂ ಲೈನ್, ಕೋಂಟೂರು ಅಂತರ ಸ್ಪೋಟ್ ಹೈಟ್)

20. ಕೆಳಗೆ ನೀಡಿರುವವುಗಳಲ್ಲಿ ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ವಿಶೇಷತೆಯಲ್ಲಿ ಒಳಪಡದ್ದು ಯಾವುದು?
(ಜನಸಾಂದ್ರತೆ, ಪ್ರಾಯ ರಚನೆ, ಆಯುಸ್ಸು ದೈರ್ಘ್ಯ, ಆಶ್ರಿತರ ಪ್ರಮಾಣ)

21. ಸೂರ್ಯನು ದಕ್ಷಿಣಾಯನ ರೇಖೆಯ ನೇರ ಮೇಲಿರುತ್ತಾನೆ. ಈ ದಿನವನ್ನು ಏನೆಂದು ಕರೆಯುತ್ತಾರೆ ?
(ಮಕರ ಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿ, ಸಮರಾತ್ರಿ ದಿನ, ವಿಷುವತ್ಸಂಕ್ರಾಂತಿ)

22. ಕೆಳಗೆ ನೀಡಿರುವವುಗಳಲ್ಲಿ ಅಕ್ಷ ಶಕ್ತಿ ಬಣದಲ್ಲಿ ಸೇರದ ರಾಷ್ಟ್ರ ಯಾವುದು ?
(ಇಟಲಿ, ಜರ್ಮನಿ, ಚೈನಾ, ಜಪಾನ್)

23. "ನಿರ್ವಾತ ವಲಯ," ವು ಜಾಗತಿಕ ಒತ್ತಡ ವಲಯಗಳ ಯಾವ ವಲಯದಲ್ಲಿ ಕಂಡುಬರುತ್ತದೆ ?
(ಭೂಮಧ್ಯೆ ರೇಖಾ ಕಡಿಮೆ ಒತ್ತಡ ವಲಯ, ಉಪಉಷ್ಣವಲಯದ ಅಧಿಕ ಒತ್ತಡ ವಲಯ, ಉಪ ಧ್ರುವೀಯ ಕಡಿಮೆ ಒತ್ತಡ ವಲಯ, ಧ್ರುವೀಯ ಅಧಿಕ ಒತ್ತಡ ವಲಯ)

24. ಜೂನ್ ತಿಂಗಳಿನಲ್ಲಿ ಕೃಷಿ ಆರಂಭಿಸಿ ನವೆಂಬರ್ ತಿಂಗಳಿನಲ್ಲಿ ಕೊಯ್ಲಿ ನಡೆಸುವ ಕೃಷಿ ಕಾಲವನ್ನು ಯಾವ ಹೆಸರಿನಿಂದ ಕರೆಯುವರು ?
(ರಾಬಿ, ಖಾರಿಫ್, ನಾರು ಬೆಳೆಗಳು, ಪಾನೀಯ ಬೆಳೆಗಳು)

25. ಒಂದು ಪ್ರದೇಶದ ಭೂಮಿಯ ಮೇಲ್ಮೈ ಕಾಲಕ್ಕನುಸಾರವಾಗಿ ಅವುಗಳಲ್ಲಿ ಉಂಟಾಗುವ ಬದಲಾವಣೆಗಳ ಕುರಿತು ತಿಳಿಯಲು ಬಳಸುವ ವಿಶ್ಲೇಷಣೆ ಯಾವುದು ?
(ಜಾಲ ವಿಶ್ಲೇಷಣೆ, ಆವರ್ತ ವಿಶ್ಲೇಷಣೆ, ಓವರ್ ಲೆ ವಿಶ್ಲೇಷಣೆ, ವಿಷುವತ್ಸಂಕ್ರಾಂತಿ ದಿನ)

26. ವಿ.ಟಿ. ಭಟ್ಟತಿರಿಪಾಡ್ ನೇತೃತ್ವ ನೀಡಿದ ಸುಧಾರಣಾ ಚಳುವಳಿ ಯಾವುದು ?
(ಆತ್ಮವಿದ್ಯಾ ಸಂಘ, ಸಾಧು ಜನ ಪರಿಪಾಲನ ಸಂಘ, ನಾಯರ್ ಸರ್ವೀಸ್ ಸೊಸೈಟಿ, ಯೋಗಕ್ಷೇಮ ಸಭೆ)

27. ಕೂಡಂಕುಳಂ ಅಣುಶಕ್ತಿ ಕೇಂದ್ರ ಯಾವ ರಾಜ್ಯದಲ್ಲಿ ಕೇಂದ್ರೀಕರಿಸಿದೆ ?
(ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ್)

28. ಧ್ರುವಗಳ ಮೂಲಕ ಭೂಮಿಯನ್ನು ಸುತ್ತಿ ಸಂಚರಿಸುವ ಉಪಗ್ರಹಗಳನ್ನು ಏನೆಂದು ಕರೆಯುವರು ?
(ಸೌರಸ್ಥಿರ ಉಪಗ್ರಹಗಳು, ಭೂಸ್ಥಿರ ಉಪಗ್ರಹಗಳು, ಜಿ.ಐ.ಎಸ್., ಜಿ.ಪಿ.ಎಸ್)

29. ಉತ್ತರ ಭಾರತದ ಬಯಲುಗಳಲ್ಲಿ ಬೀಸುವ ಪ್ರಾದೇಶಿಕ ಮಾರುತ ಯಾವುದು ?
(ಫೋಹ್ನ, ಹರ್ಮಾಟನ್, ಚಿನುಕ್, ಲೂ)

30. ಸಹಕಾರ, ಸ್ವ ಸಹಾಯ, ಪರಸ್ಪರ ಸಹಾಯ ಎಂಬೀ ತತ್ವಗಳ ಆಧಾರದಲ್ಲಿ ಕಾರ್ಯ ನಿರ್ವಹಿಸುವ ಬ್ಯಾಂಕ್ ಯಾವುದು?
(ವಾಣಿಜ್ಯ ಬ್ಯಾಂಕ್, ಸಹಕಾರಿ ಬ್ಯಾಂಕ್, ರಿಸರ್ವ್ ಬ್ಯಾಂಕ್, ಮುದ್ರಾ ಬ್ಯಾಂಕ್)

**2 ಅಂಕೆಯ ಪ್ರಶ್ನೆಗಳು**

31. ಕುರುಚಿಯರ ದಂಗೆಯ ಕಾರಣಗಳು ಯಾವುವು?

32. ಪೌರಪ್ರಜ್ಞೆ ಬೆಳೆಸುವುದರಲ್ಲಿ ಕುಟುಂಬ ಯಾವೆಲ್ಲ ರೀತಿಯ ಪಾತ್ರವನ್ನು ವಹಿಸುತ್ತದೆ?

33. ಭಾರತದ ಪ್ರಧಾನ ಪ್ರತ್ಯಕ್ಷತೆರಿಗೆಗಳು ಯಾವುವು?

34. ಆಹಾರ ಸುರಕ್ಷಾ ಇಲಾಖೆ, ಲೀಗಲ್ ಮೆಟ್ರೋಲಜಿ ಇಲಾಖೆ ಎಂಬಿವುಗಳು ಬಳಕೆಗಾರರ ಆಸಕ್ತಿಗಳನ್ನು ಸಂರಕ್ಷಿಸಲು ಹೇಗೆ ಕಾರ್ಯನಿರ್ವಹಿಸುತ್ತದೆ?

35. ಭಾರತದ ಹವಾಮಾನದ ಮೇಲೆ ಪ್ರಭಾವ ಬೀರುವ ಯಾವುದಾದರೂ ಎರಡು ಘಟಕಗಳನ್ನು ಬರೆಯಿರಿ.

36. ಕೋಂಟೂರು ರೇಖೆಗಳಿಂದ ಯಾವೆಲ್ಲಾ ವಿಷಯಗಳನ್ನು ತಿಳಿದುಕೊಳ್ಳಬಹುದು?

37. ಭಾರತದಲ್ಲಿ ಅನುಭವಕ್ಕೆ ಬರುವ ಪ್ರಾದೇಶಿಕ ಮಾರುತಗಳು ಯಾವುವು?

38. ಭಾರತದ ಸಾಮಾಜಿಕ ಸುಧಾರಣಾ ಸಂಘಟನೆಗಳ ಪ್ರಧಾನ ಉದ್ದೇಶಗಳು ಯಾವುವು?

39. ಪೌರ ಪ್ರಜ್ಞೆ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲಿರುವ ಎರಡು ನಿರ್ದೇಶಗಳನ್ನು ಬರೆಯಿರಿ.

40. ಸಂಯೋಜಿತ ಶಿಶು ಅಭಿವೃದ್ಧಿ ಕಾರ್ಯಕ್ರಮ (ICDS)ದ ಉದ್ದೇಶಗಳೇನು?

41. 1986ರ ಗ್ರಾಹಕ ಸಂರಕ್ಷಣಾ ಕಾನೂನಿನಲ್ಲಿ ನೀಡಲಾಗಿರುವ ಎರಡು ಪ್ರಧಾನ ಹಕ್ಕುಗಳನ್ನು ಬರೆಯಿರಿ.

42. ಶಾಶ್ವತ ಭೂಕಂದಾಯ ನಿಯಮದ ಎರಡು ವಿಶೇಷತೆಗಳೇನು?

43. ಅಂತರಾಷ್ಟ್ರೀಯ ದಿನಾಂಕ ರೇಖೆಯ ಪ್ರಾಧಾನ್ಯತೆಯನ್ನು ಬರೆಯಿರಿ.

44. ಉತ್ತರಾಯನ ಮತ್ತು ದಕ್ಷಿಣಾಯನಗಳನ್ನು ವಿಶದೀಕರಿಸಿರಿ.

45. ಪರ್ಯಾಯ ದ್ವೀಪದ ಪೀಠಭೂಮಿಯಲ್ಲಿ ಕಂಡುಬರುವ ಎರಡು ಮಣ್ಣಿನ ವಿಧವನ್ನು ಬರೆಯಿರಿ.

46. ಭಾರತೀಯ ಸಮಾಜವನ್ನು ಆಧುನೀಕರಣಗೊಳಿಸಲು ಶ್ರಮಿಸಿದ ರಾಜಾರಾಮ್ ಮೋಹನ್‌ರಾಯ್‌ರವರ ಸುಧಾರಣಾ ಚಟುವಟಿಕೆಗಳನ್ನು ಚುಟುಕಾಗಿ ವಿವರಿಸಿರಿ.

47. ಶಿವಾಲಿಕ್ ಪರ್ವತಶ್ರೇಣಿಯ ಯಾವುದಾದರೂ ಎರಡು ವಿಶೇಷತೆಗಳನ್ನು ಬರೆಯಿರಿ?

48. ಇಲೆಕ್ಟ್ರಾನಿಕ್ ಬ್ಯಾಂಕಿನ ವಿಶೇಷತೆಗಳು ಯಾವುವು?

49. ಸರಕಾರದ ಸಾರ್ವಜನಿಕ ಆದಾಯದ ಮೂಲಗಳು ಯಾವುವು?

50. ಭಾರತೀಯ ಸಿವಿಲ್ ಸರ್ವೀಸ್‌ನ ಭಾಗವಾದ ಅಖಿಲ ಭಾರತೀಯ ಸಿವಿಲ್ ಸರ್ವೀಸ್‌ನ ಕುರಿತು ಟಿಪ್ಪಣಿ ತಯಾರಿಸಿರಿ.

51. ವೈಕಂ ಸತ್ಯಾಗ್ರಹದ ಕುರಿತು ಲಘು ಟಿಪ್ಪಣಿ ಬರೆಯಿರಿ.

52. ಸ್ಥಳ ಸರೂಪ ಭೂಪಟದ ಯಾವುದಾದರೂ ಎರಡು ಪ್ರಾಥಮಿಕ ಮಾಹಿತಿಗಳನ್ನು ಬರೆಯಿರಿ.

53. ಪ್ರಕಾಶ ಚೈತನ್ಯದ ಮೂಲವನ್ನು ಆಧಾರವಾಗಿಟ್ಟುಕೊಂಡು ದೂರ ಸಂವೇದನೆಗಳು ಯಾವುವು?

54. ಭಾರತದ ಪ್ರಾಂತ್ಯಗಳ ಪುನರ್ವಿಂಗಡನಾ ಆಯೋಗದ ಸದಸ್ಯರು ಯಾರೆಲ್ಲಾ?

**4 ಅಂಕೆಯ ಪ್ರಶ್ನೆಗಳು**

55. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಕಲಾಪಗಳು ಯಾವುವು?

56. ಭಾರತೀಯ ಕಾಲಮಾನ ಮತ್ತು ಗ್ರೀನಿಚ್ ಸಮಯದ ಕುರಿತು ಕಿರುಟಿಪ್ಪಣಿ ಬರೆಯಿರಿ.

57. ಕೆಳಗೆ ನೀಡಿದ ಭೂ ವಿಶೇಷತೆಗಳನ್ನು, ನೀಡಿರುವ ಭಾರತದ ಬಾಹ್ಯ ರೇಖ ಚಿತ್ರದಲ್ಲಿ ಗುರುತಿಸಿ ಬರೆಯಿರಿ.

    a. ಗೋದಾವರಿ ನದಿ


    b. ಸಾತ್ಪುರ ಪರ್ವತ ಶ್ರೇಣಿಗಳು

    c. ವಿಶಾಖಪಟ್ಟಣ ಬಂದರು

    d. ದಖ್ಖಣಪೀಠ ಭೂಮಿ

58. ನೌಕರ ವೃಂದದ ವಿಶೇಷತೆಗಳು ಯಾವುವು?

59. ಕೊಟ್ಟಿರುವ ಗ್ರಿಡ್‌ನಲ್ಲಿ ಕೋಟೆ, ಬಾವಿ ಎಂಬಿವುಗಳ ಸ್ಥಾನವನ್ನು ನಾಲ್ಕು ಅಂಕೆಯ ಗ್ರಿಡ್ ರೆಫರೆನ್ಸ್ ಮೂಲಕ ಕಂಡುಹಿಡಿಯಿರಿ.




60. ಮುಂಬೈಯು ಪ್ರಧಾನ ಹತ್ತಿ ಉದ್ದಿಮೆ ಕೇಂದ್ರವಾಗಿ ಬದಲಾಗಲು ಕಾರಣವಾದ ಸನ್ನಿವೇಶಗಳು ಯಾವುವು?

61. A ಕಾಲಂನಲ್ಲಿರುವವುಗಳಿಗೆ ಸರಿಹೊಂದುವಂತೆ B ಕಾಲಂನಲ್ಲಿರುವವುಗಳನ್ನು ಕ್ರಮೀಕರಿಸಿ ಬರೆಯಿರಿ.

| A | B |
|---|---|
| ರಾಮಕೃಷ್ಣ ಮಿಷನ್ | ಸರ್ ಸಯ್ಯದ್ ಅಹಮದ್ ಖಾನ್ |
| ಸತ್ಯಶೋಧಕ ಸಮಾಜ | ಸ್ವಾಮಿ ದಯಾನಂದ ಸರಸ್ವತಿ |
| ಆಲಿಘಡ್ | ಸ್ವಾಮಿ ವಿವೇಕಾನಂದ |
| ಆರ್ಯ ಸಮಾಜ | ಜ್ಯೋತಿ ಭಾ ಪುಲೆ |

62. ಪಾಲ್ಗೊಳ್ಳುವ ನಿರೀಕ್ಷಣೆ ಮತ್ತು ಪಾಲ್ಗೊಳ್ಳದೆ ಇರುವ ನಿರೀಕ್ಷಣೆಗಳೊಳಗಿನ ವ್ಯತ್ಯಾಸವೇನು?

63. ಸಾರ್ವಜನಿಕ ಆಡಳಿತೆಯ ಪ್ರಾಧಾನ್ಯತೆಗಳನ್ನು ಬರೆಯಿರಿ.

64. ಜಿ.ಎಸ್.ಟಿ ಎಂದರೇನು? ವಿವಿಧ ವಿಧದ ಜಿ.ಎಸ್.ಟಿಗಳು ಯಾವುವು?

65. ನೆಪೋಲಿಯನ್‌ನ ಆಡಳಿತಾ ಸುಧಾರಣೆಗಳಲ್ಲಿ ಯಾವುದಾದರೂ ನಾಲ್ಕನ್ನು ಬರೆಯಿರಿ.

66. ಒಂದನೇ ಜಾಗತಿಕ ಯುದ್ಧದ ಯಾವುದಾದರೂ ನಾಲ್ಕು ಪರಿಣಾಮಗಳನ್ನು ಬರೆಯಿರಿ.

67. ಕೆಳಗೆ ನೀಡಿರುವವುಗಳನ್ನು ಪರಂಪರಾಗತ ಶಕ್ತಿ ಸಂಪನ್ಮೂಲ ಹಾಗೂ ಪರಂಪರಾಗತವಲ್ಲದ ಶಕ್ತಿ ಸಂಪನ್ಮೂಲಗಳೆಂದು ವರ್ಗೀಕರಿಸಿ ಬರೆಯಿರಿ.

(ಜೈವಿಕ ಇಂಧನಗಳು, ಕಲ್ಲಿದ್ದಲು, ಸೌರಚೈತನ್ಯ, ಪೆಟ್ರೋಲಿಯಂ)

68. **ಎ** ಕಾಲಂನಲ್ಲಿ ನೀಡಿರುವವುಗಳಿಗೆ ಸೂಕ್ತವಾದುದನ್ನು **ಬಿ** ಕಾಲಂನಿಂದ ಕಂಡುಕೊಂಡು ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| ಸಂತಾಳರ ಪ್ರತಿಭಟನೆ | ದಾದಾಬಾಯಿ ನವರೋಜಿ |
| ಮಾಪಿಳ್ಳೆ ದಂಗೆ | ಬಾಲಗಂಗಾಧರ ತಿಲಕ |
| ಸೋರಿಕೆ ಸಿದ್ಧಾಂತ | ಮಲಬಾರು |
| ಭಾರತದ ಅರಾಜಕತೆಯ ಪಿತಾಮಹ | ರಾಜ್‌ಮಹಲ್ ಬೆಟ್ಟಗಳು |

69. ಗ್ರಾಹಕ ಶಿಕ್ಷಣವನ್ನು ನೀಡುವುದರ ಮೂಲಕ ರೂಪುಗೊಳ್ಳುವ ಗ್ರಾಹಕ ಪ್ರಜ್ಞೆಗಳು ಯಾವುವು?

70. ರಾಷ್ಟ್ರವು ನಿರ್ವಹಿಸುವ ನಿರ್ಬಂಧಿತ ಜವಾಬ್ದಾರಿಗಳಿಗಿಂತ ವಿವೇಚನಾತ್ಮಕ ಜವಾಬ್ದಾರಿಗಳು ಹೇಗೆ ಭಿನ್ನವಾಗಿದೆ? ಉದಾಹರಣೆಗಳನ್ನು ಬರೆಯಿರಿ.

71. ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಶಿಕ್ಷಣ ಹಾಗೂ ಆರೋಗ್ಯ ಸಂರಕ್ಷಣೆಯ ಪಾತ್ರದ ಕುರಿತು ಟಿಪ್ಪಣಿ ತಯಾರಿಸಿರಿ.

72. ಉಪ್ಪು ಎಂಬುದನ್ನು ಹೋರಾಟದ ಆಯುಧವಾಗಿ ಆಯ್ಕೆ ಮಾಡಲು ಗಾಂಧೀಜಿಯನ್ನು ಪ್ರೇರೇಪಿಸಿದ ಘಟಕಗಳು ಯಾವುವು?

73. ಪೌರ ಪ್ರಜ್ಞೆಯು ಎದುರಿಸುವ ಸವಾಲುಗಳನ್ನು ಎದುರಿಸುವುದು ಹೇಗೆ?

74. ಆಕಾಶೀಯ ದೂರ ಸಂವೇದನಾ ತಂತ್ರಜ್ಞಾನದ ಕೊರತೆಗಳು ಯಾವುವು?

75. **ಎ** ಕಾಲಂನಲ್ಲಿ ನೀಡಿರುವವುಗಳಿಗೆ ಸೂಕ್ತವಾದವುಗಳನ್ನು **ಬಿ** ಕಾಲಂನಿಂದ ಕಂಡುಕೊಂಡು ಬರೆಯಿರಿ.

| ಎ | ಬಿ |
|---|---|
| ಹೋಮಿ ಜಹಾಂಗೀರ್ ಬಾಬ | ಆಂಧ್ರಪ್ರದೇಶ |
| ಎಚ್.ಎನ್. ಕುನ್ಸುರು | ಸಂವಿಧಾನ ನಿರ್ಮಾಣ ಸಮಿತಿ |
| ಪೋಟ್ಟಿ ಶ್ರೀರಾಮುಲು | ಭಾರತ ಅಣುಶಕ್ತಿ ಆಯೋಗ |
| ಡಾ ರಾಜೇಂದ್ರ ಪ್ರಸಾದ್ | ಪ್ರಾಂತ್ಯ ಪುನರ್ವಿಂಗಡನಾ ಆಯೋಗ |

**6 ಅಂಕೆಯ ಪ್ರಶ್ನೆಗಳು**

76. ಅಸಹಕಾರ ಚಳುವಳಿಯ ವಿಶೇಷತೆಗಳು ಯಾವುವು? ಈ ಚಳುವಳಿಯ ಭಾಗವಾಗಿ ನಡೆದ ಬಹಿಷ್ಕಾರಗಳು ಜೊತೆಗೆ ವಸ್ತುಗಳನ್ನು ಉತ್ಪಾದಿಸಲು ನೀಡಿದ ಆಹ್ವಾನದ ಭಾಗವಾಗಿ ನಡೆದ ಚಟುವಟಿಕೆಗಳು ಯಾವುವು?

77. ಮರ್ಕಂಡಲಿಸಂ ಎಂದರೇನು? ಮರ್ಕಂಡಲಿಸ್ಟ್ ಕಾನೂನುಗಳನ್ನು ಬರೆಯಿರಿ.

78. ಸೂರ್ಯನ ಅಯನ ಹಾಗೂ ಅದರ ಪರಿಣಾಮವಾಗಿ ಎರಡು ಅರ್ಧಗೋಳಗಳಲ್ಲಿ ಉಂಟಾಗುವ ಋತುಬೇಧಗಳ ವಿಶೇಷತೆಗಳನ್ನು ಈ ಕೆಳಗೆ ನೀಡಿರುವ ದಿನಗಳ ಆಧಾರದಲ್ಲಿ ವಿವರಿಸಿರಿ.

   a. ಜೂನ್ 21

   b. ಡಿಸೆಂಬರ್ 22

   c. ಮಾರ್ಚ್ 21

79. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ವಿದ್ಯಾಭ್ಯಾಸ, ಆರೋಗ್ಯ ಸಂರಕ್ಷಣೆ ಎಂಬಿವುಗಳು ದೇಶದ ಪ್ರಗತಿಯಲ್ಲಿ ಹೇಗೆ ಸಹಾಯಕವಾಗುತ್ತದೆ ವಿವರಿಸಿರಿ.

80. ಚೀನಾವು ಜನತಾ ಗಣರಾಜ್ಯವಾಗಿ ಬದಲಾದದ್ದು ಹೇಗೆ ವಿವರಿಸಿರಿ

81. ವಾತಾವರಣದ ಒತ್ತಡಕ್ಕೆ ಸಂಬಂಧಪಟ್ಟು ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ

   a. ವಾತಾವರಣದ ಒತ್ತಡ ಎಂದರೇನು ?

   b. ವಾತಾವರಣದ ಒತ್ತಡವನ್ನು ಅಳೆಯುವ ಉಪಕರಣ ಯಾವುದು?

   c. ಎತ್ತರ, ಉಷ್ಣತೆ ಎಂಬೀ ಘಟಕಗಳು ವಾತಾವರಣದ ಒತ್ತಡದ ಮೇಲೆ ಹೇಗೆ ಪ್ರಭಾವ ಬೀರುತ್ತದೆ?

82. ಕೇರಳದ ರಾಷ್ಟ್ರೀಯ ಚಳುವಳಿಯನ್ನು ಈ ಕೆಳಗೆ ನೀಡಿರುವ ಸೂಚಕಗಳ ಆಧಾರದಲ್ಲಿ ವಿವರಿಸಿರಿ?

   – ಮಲಬಾರು

   – ಕೊಚ್ಚಿ

   – ತಿರುವಾಂಕೂರು

83. ವಾಣಿಜ್ಯ ಬ್ಯಾಂಕುಗಳು ಸ್ವೀಕರಿಸುವ ವಿವಿಧ ಠೇವಣಿಗಳು ಯಾವುವು?

84. ಭಾರತದ ಉಪದ್ವೀಪದಲ್ಲಿ ಬೀಸುವ ನೈಋತ್ಯ ಮುನ್ಸೂನು ಮಾರುತದ ಎರಡು ಶಾಖೆಗಳು ಯಾವುವು? ಇದು ಭಾರತದ ಹವಾಮಾನದ ಮೇಲೆ ಬೀರುವ ಪರಿಣಾಮವೇನು?

85. ರಾಷ್ಟ್ರ ರೂಪೀಕರಣ ಸಿದ್ಧಾಂತಗಳು ಯಾವುವು? ಅವುಗಳಲ್ಲಿ ಯಾವುದಾದರು ಎರಡು ಸಿದ್ಧಾಂತಗಳನ್ನು ವಿಶದೀಕರಿಸಿರಿ.

86. ಕೇರಳದ ಸಮಾಜದಲ್ಲಿ ನೆಲೆ ನಿಂತಿದ್ದ ಸಾಮಾಜಿಕ ಅಸಮತ್ವಕ್ಕೆ ವಿರುದ್ಧವಾಗಿ ನಡೆದ ಹೋರಾಟಗಳ ಕುರಿತು ಕಿರು ಟಿಪ್ಪಣಿ ಬರೆಯಿರಿ.

   - ಚನ್ನಾರ್ ಚಳವಳಿ
   - ವೈಕ್ಕಂ ಸತ್ಯಾಗ್ರಹ
   - ಗುರುವಾಯೂರ್ ಸತ್ಯಾಗ್ರಹ

87. ಎರಡನೇ ಜಾಗತಿಕ ಯುದ್ಧದ ಕಾರಣಗಳನ್ನು ಹಾಗೂ ಪರಿಣಾಮಗಳನ್ನು ವಿಶದೀಕರಿಸಿರಿ.

88. a) ಭೂ ಮಾಹಿತಿ ವ್ಯವಸ್ಥೆ ಎಂದರೇನು?

b) ಭೂ ಮಾಹಿತಿ ವ್ಯವಸ್ಥೆಯ ಪ್ರಯೋಜನಗಳೇನು?

89. ಭಾರತದ ಶಿಕ್ಷಣದ ಕುರಿತು ಅಧ್ಯಯನ ನಡೆಸಲು ಮತ್ತು ಶಿಫಾರಸು ಸಮರ್ಪಿಸಲು ಸರಕಾರ ನೇಮಿಸಿದ ಆಯೋಗಗಳು ಯಾವುವು? ಆಯೋಗದ ಶಿಫಾರಸುಗಳನ್ನು ಬರೆಯಿರಿ.

90. ಪೌರಪ್ರಜ್ಞೆಯನ್ನು ಬೆಳೆಸುವುದರಲ್ಲಿ ಈ ಕೆಳಗಿನವುಗಳು ವಹಿಸುವ ಪಾತ್ರವನ್ನು ಬರೆಯಿರಿ.

- ಕುಟುಂಬ
- ವಿದ್ಯಾಭ್ಯಾಸ
- ಪ್ರಜಾಪ್ರಭುತ್ವ

91. ಬಳಕೆಗಾರರ ಆಸಕ್ತಿಗಳನ್ನು ಸಂರಕ್ಷಿಸುವ ಸಲುವಾಗಿ ಕಾರ್ಯನಿರ್ವಹಿಸುವ ಇಲಾಖೆಗಳು ಮತ್ತು ಸಂಸ್ಥೆಗಳು ಯಾವುವು ಮತ್ತು ಅವುಗಳ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.

92. ಈ ಕೆಳಗೆ ನೀಡಿರುವ ಆಹಾರ ಬೆಳೆಗಳಿಗೆ ಸೂಕ್ತವಾದ ಘಟಕಗಳ ಕುರಿತು ಬರೆಯಿರಿ.

- ಭತ್ತ
- ಗೋಧಿ
- ಜೋಳ

93. ಬ್ರಿಟಿಷರು ಭಾರತದಲ್ಲಿ ಜ್ಯಾರಿಗೊಳಿಸಿದ ಭೂಕಂದಾಯ ವ್ಯವಸ್ಥೆಗಳು ಯಾವುವು ? ಅವುಗಳ ವಿಶೇಷತೆಗಳನ್ನು ಬರೆಯಿರಿ.

94. ಮಾರುತಗಳ ವೇಗ ಮತ್ತು ದಿಕ್ಕಿನ ಮೇಲೆ ಪ್ರಭಾವ ಬೀರುವ ಘಟಕಗಳನ್ನು ವಿಶದೀಕರಿಸಿರಿ

95. ಭಾರತೀಯ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಮಾಡಲು ಸಮಾಜ ಸುಧಾರಕರು ಮುಂದಿರಿಸಿದ ಬೇಡಿಕೆಗಳು ಯಾವುವು?

ಇವರ ಕಾರ್ಯಚಟುವಟಿಕೆಯ ಫಲವಾಗಿ ನಿಷೇಧಿಸಲ್ಪಟ್ಟ ಅನಾಚಾರಗಳು ಯಾವುವು?

96. ಸಾಮ್ರಾಜ್ಯಶಾಹಿತ್ವ ಎಂದರೇನು?

ಇದು ವಸಾಹತುಗಳನ್ನು ಯಾವೆಲ್ಲಾ ರೀತಿಯಲ್ಲಿ ಬಾಧಿಸಿತು?

97. ಬಾಹ್ಯಾಕಾಶ ಸಂಶೋಧನೆ ಹಾಗೂ ದೇಶೀಯ ರಾಜ್ಯಗಳ ವಿಲೀನೀಕರಣ ಎಂಬಿವುಗಳಲ್ಲಿ ಸ್ವಾತಂತ್ರ್ಯ ನಂತರ ಭಾರತವು ನಡೆಸಿದ ಪ್ರಯತ್ನಗಳನ್ನು ವಿವರಿಸಿರಿ.

98. ಫ್ಯಾಸಿಸಂನ ವಿಶೇಷತೆಗಳು ಯಾವುವು?

99. ಭೂಸ್ಥಿರ ಮತ್ತು ಸೌರ ಸ್ಥಿರ ಉಪಗ್ರಹಗಳನ್ನು ಪರಸ್ಪರ ಹೋಲಿಸಿ ಬರೆಯಿರಿ.

100. ಕೆಳಗೆ ನೀಡಿರುವ ಸೂಚಕಗಳ ಆಧಾರದಲ್ಲಿ ಫ್ರೆಂಚ್ ಕ್ರಾಂತಿಯ ಕುರಿತು ವಿಶದೀಕರಿಸಿರಿ.

a. ಕ್ರಾಂತಿಗೆ ಕಾರಣವಾದ ಸನ್ನಿವೇಶ

b. ಫ್ರೆಂಚ್ ಕ್ರಾಂತಿಯ ಪ್ರಭಾವ

101. ಗಾಂಧೀಜಿಯ ಮುಂದಾಳತನದಲ್ಲಿ ನಡೆದ ರಾಷ್ಟ್ರೀಯ ಹೋರಾಟಗಳ ಕುರಿತು ಬರೆಯಿರಿ.

- ಅಸಹಕಾರ ಚಳವಳಿ
- ನಾಗರಿಕ ನಿಯಮ ಉಲ್ಲಂಘನೆ

102. ಜಾಗತಿಕ ಒತ್ತಡ ವಲಯದ ಆಧಾರದಲ್ಲಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

- ಜಾಗತಿಕ ಒತ್ತಡ ವಲಯಗಳು ಯಾವುವು?
- ಜಾಗತಿಕ ಒತ್ತಡ ವಲಯದ ರೂಪೀಕರಣಕ್ಕೆ ಕಾರಣವೇನು?
- ಯಾವುದಾದರೂ ಒಂದು ಜಾಗತಿಕ ಒತ್ತಡ ರೂಪುಗೊಳ್ಳುವುದರ ಸನ್ನಿವೇಶದ ಕುರಿತು ವಿಶದೀಕರಿಸಿರಿ.

103. ರಷ್ಯಾ ಕ್ರಾಂತಿಗೆ ಸಂಬಂಧಿಸಿ ಕೆಳಗೆ ನೀಡಿರುವವುಗಳ ಕುರಿತು ವಿಶದೀಕರಿಸಿರಿ

- ಫೆಬ್ರವರಿ ಕ್ರಾಂತಿ
- ಒಕ್ಟೋಬರ್ ಕ್ರಾಂತಿ

104. ಗ್ರೀನಿಚ್ ರೇಖೆ, ಅಂತಾರಾಷ್ಟ್ರೀಯ ದಿನಾಂಕ ರೇಖೆ, ಭಾರತದ ಪ್ರಮಾಣ ರೇಖಾಂಶ ಎಂಬಿವುಗಳ ವಿಶೇಷತೆಗಳನ್ನು ಪಟ್ಟಿ ಮಾಡಿರಿ.

- ಗ್ರೀನಿಚ್ ಸಮಯ ಮಧ್ಯಾಹ್ನ 2 ಗಂಟೆ ಆಗಿರುವಾಗ ಭಾರತದ ಪ್ರಮಾಣ ರೇಖಾಂಶದಲ್ಲಿನ ಸಮಯವನ್ನು ಕಂಡುಕೊಂಡು ಬರೆಯಿರಿ.

## ಉತ್ತರ ಸೂಚಕ (Answer Key)

**1 ಅಂಕೆ ಪ್ರಶ್ನೆಗಳ ಉತ್ತರಗಳು**

1. ಡಿ.ಕೆ. ಕಾರ್ವೆ
2. ಕಾರಕೋರಂ
3. ಮುರಕಲ್ಲು ಮಣ್ಣು
4. ಭೂಮಿಯ ಭ್ರಮಣ
5. ಈಸ್ಟಿಂಗ್ಸ್
6. ಜಾನ್ ಲಾಕ್
7. ಚಿನೂಕು
8. ವಿನೋದ ತೆರಿಗೆ
9. ಝಾರಿಯಾ
10. ಜಲಾಶಯ
11. ಗೋದಾವರಿ
12. ಸರ್ವೇ ಆಫ್ ಇಂಡಿಯಾ
13. $0^0$ ರೇಖಾಂಶ ರೇಖೆ
14. ಬೆಲ್‌ಗ್ರೇಡ್
15. ಇನ್ಸಾಟ್
16. ಹೈದರಾಬಾದ್
17. ಮುಂಬೈ
18. 66½
19. ಕೋಂಟೂರ್ ಅಂತರ
20. ಆಯುಸ್ಸು ದೈರ್ಘ್ಯ

21. ಮಕರ ಸಂಕ್ರಾಂತಿ

22. ಚೈನಾ

23. ಭೂಮಧ್ಯ ರೇಖ ಕಡಿಮೆ ಒತ್ತಡ ವಲಯ

24. ಖಾರಿಫ್

25. ಓವರ್ಲೇ ವಿಶ್ಲೇಷಣೆ

26. ಯೋಗಕ್ಷೇಮ ಸಭೆ

27. ತಮಿಳುನಾಡು

28. ಸೌರ ಸ್ಥಿರ ಉಪಗ್ರಹಗಳು

29. ಲೂ

30. ಸಹಕಾರಿ ಬ್ಯಾಂಕ್

**2 ಅಂಕೆ ಪ್ರಶ್ನೆಗಳ ಉತ್ತರಗಳು**

31. 
- ಬ್ರಿಟಿಷರು ಹೆಚ್ಚು ತೆರಿಗೆಯನ್ನು ಹೊರಿಸಿದುದು.
- ತೆರಿಗೆಯನ್ನು ಹಣವಾಗಿ ಪಾವತಿಸಲು ನಿರ್ಬಂಧಿಸಿರುವುದು.
- ತೆರಿಗೆ ಪಾವತಿಸಲು ಸಾಧ್ಯವಾಗದಿರುವವರ ಕೃಷಿ ಭೂಮಿಯನ್ನು ಬ್ರಿಟಿಷರು ನಿರ್ಬಂಧವಾಗಿ ವಶಪಡಿಸಿದರು.

(ಯಾವುದಾದರೂ ಎರಡು)

32. 
- ಕುಟುಂಬವು ಹಿರಿಯರನ್ನು ಗೌರವಿಸಲು ಮತ್ತು ಸಾಮಾಜಿಕ ಸೇವೆಯಲ್ಲಿ ಪಾಲ್ಗೊಳ್ಳಲು ಕಲಿಸುವ ಪ್ರಾಥಮಿಕ ಸಂಸ್ಥೆಯಾಗಿದೆ.
- ಸದಸ್ಯರಲ್ಲಿ ಕರ್ತವ್ಯಪ್ರಜ್ಞೆ ಬೆಳೆಸುವುದಿಲ್ಲ ಹಾಗೂ ಉಳಿಸುವುದರಲ್ಲಿ ಕುಟುಂಬವು ಪ್ರಧಾನ ಪಾತ್ರ ವಹಿಸುತ್ತದೆ.
- ಕುಟುಂಬದಿಂದ ಲಭಿಸುವ ಪ್ರೇರಣೆ ಹಾಗೂ ಪ್ರೋತ್ಸಾಹ ಉನ್ನತವಾದ ಪೌರಪ್ರಜ್ಞೆಯನ್ನು ಬೆಳೆಸುತ್ತದೆ.
- ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬಕ್ಕಾಗಿ, ಕುಟುಂಬವು ಸಮಾಜಕ್ಕಾಗಿ ಎಂಬ ಪ್ರಜ್ಞೆಯನ್ನು ಕುಟುಂಬದಲ್ಲಿ ಬೆಳೆಸಲು ಸಾಧ್ಯವಾಗಬೇಕು.

(ಯಾವುದಾದರೂ ಎರಡು)

33. ವೈಯಕ್ತಿಕ ಆದಾಯ ತೆರಿಗೆ

ಕಾರ್ಪೊರೇಟ್ ತೆರಿಗೆ

34. ಲೀಗಲ್ ಮೆಟ್ರೋಲಜಿ ಇಲಾಖೆ + ಅಳತೆ ಮತ್ತು ತೂಕದ ಗುಣಮಟ್ಟವನ್ನು

(ಅಳತೆ ಮತ್ತು ತೂಕ ತಪಾಸಣಾ ಇಲಾಖೆ) ಖಾತರಿಪಡಿಸುತ್ತದೆ.

* ಆಹಾರ ಸುರಕ್ಷಾ ಇಲಾಖೆ - ಆಹಾರ ವಸ್ತುಗಳ ಗುಣಮಟ್ಟವನ್ನು ದೃಢಪಡಿಸುತ್ತದೆ.

35. • ಅಕ್ಷಾಂಶದ ಸ್ಥಾನ • ಭೂಸ್ವರೂಪ • ಸಮುದ್ರ ಸಾಮೀಪ್ಯ • ಸಮುದ್ರಮಟ್ಟದಿಂದ ಎತ್ತರ

36. • ಭೂ ಪ್ರದೇಶದ ಎತ್ತರ

- ಇಳಿಜಾರಿನ ಅಳತೆ
- ಭೂ ಸ್ವರೂಪದ ಆಕೃತಿ

(ಯಾವುದಾದರೂ ಎರಡು)

37. ಲೂ. ಮಾವಿನ ಮಳೆ, ಕಾಲಬೈಶಾಖಿ

(ಯಾವುದಾದರೂ ಎರಡು)

38. * ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ವಿವಿಧ ಅನಾಚಾರಗಳನ್ನು ವಿರೋಧಿಸುವುದು.

* ಭೇದಭಾವವಿಲ್ಲದೆ ಎಲ್ಲರೂ ದಾರಿಯಲ್ಲಿ ನಡೆಯಲು, ಉಡುಪು ಧರಿಸಲು, ವಿದ್ಯಾಭ್ಯಾಸವನ್ನು ಪಡೆಯಲು ಅಗತ್ಯವಾದ ನಾಗರಿಕ ಹಕ್ಕುಗಳನ್ನು ಪಡೆಯುವುದು.

39. • ಪ್ರತಿಯೊಬ್ಬರು ತಮ್ಮ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿರಿ.

- ಸಾರ್ವಜನಿಕ ಹಿತಾಸಕ್ತಿಗೆ ಹಾನಿಯಾಗದಂತೆ ಸ್ವಂತ ಆಸಕ್ತಿಗಳಿಗಾಗಿ ಪ್ರಯತ್ನಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ.
- ಇತರರಿಂದ ನಿರೀಕ್ಷಿಸುವ ಬದಲಾವಣೆಗಳು ನಮ್ಮಿಂದಲೇ ಆರಂಭಿಸಬೇಕು.
- ಪ್ರಜಾಪ್ರಭುತ್ವ ಮತ್ತು ಸಹಿಷ್ಣುತೆಯ ಆಧಾರದಲ್ಲಿ ಕಾರ್ಯನಿರ್ವಹಿಸಿರಿ.
- ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಸಮಾನವಾಗಿ ಪರಿಗಣಿಸಬೇಕು

40. • 6 ವರ್ಷದ ವರೆಗಿನ ಮಕ್ಕಳ ಸಮಗ್ರ ಅಭಿವೃದ್ಧಿ

- ಗರ್ಭಿಣಿಯರ ಮತ್ತು ಹಾಲುಣಿಸುವ ತಾಯಂದಿರ ಆರೋಗ್ಯ ಸಂರಕ್ಷಣೆ

41. ಜೀವ ಹಾಗೂ ಸೊತ್ತಿಗೆ ಹಾನಿಕಾರಕವಾಗುವ ವಸ್ತುಗಳನ್ನು ಮಾರಾಟ ಮಾಡುವುದರಿಂದ ಸಂರಕ್ಷಣೆ ಲಭಿಸುವ ಹಕ್ಕು

- ವಸ್ತುಗಳ ಹಾಗೂ ಸೇವೆಗಳ ಗುಣಮಟ್ಟಕ್ಕೆ ಸಂಬಂಧಿಸಿದ ಮಾಹಿತಿಗಳ ಲಭ್ಯತೆಯ ಹಕ್ಕು
- ನ್ಯಾಯವಾದ ಬೆಲೆಗೆ ವಸ್ತುಗಳು ಮತ್ತು ಸೇವೆಗಳು ಲಭಿಸುವ ಹಕ್ಕು
- ಅಧಿಕಾರಿಗಳ ಮುಖಾಂತರ ವಿವಾದಗಳಿಗೆ ಪರಿಹಾರ ಪಡೆಯಲಿರುವ ಹಕ್ಕು
- ಗ್ರಾಹಕ ಶಿಕ್ಷಣ ಲಭಿಸಲಿರುವ ಹಕ್ಕು

42.
- ಶಾಶ್ವತ ಭೂ ಕಂದಾಯ ವ್ಯವಸ್ಥೆಯಲ್ಲಿ ತೆರಿಗೆ ಸಂಗ್ರಹಿಸುವವರು ಜಮೀನ್ದಾರರು ಆಗಿದ್ದರು.
- ತೆರಿಗೆ ಸಂಗ್ರಹಿಸುವ ಅಧಿಕಾರವಿರುವ ಪ್ರದೇಶದ ಸಂಪೂರ್ಣ ಭೂಮಿಯ ಯಜಮಾನನು ಜಮೀನ್ದಾರನಾಗಿದ್ದನು.
- ಜಮೀನ್ದಾರರು ಭೂಮಿಯ ಯಜಮಾನರಾದಾಗ ಯಥಾರ್ಥ ಕೃಷಿಕರು ಒಕ್ಕಲುಗಳಾಗಿ ಬದಲಾದರು.
- ಬೆಳೆಯ 60% ದಷ್ಟನ್ನು ಕೃಷಿಕರು ತೆರಿಗೆಯಾಗಿ ನೀಡಬೇಕಿತ್ತು.
- ಫಸಲು ಕಡಿಮೆಯಾಗಿದ್ದರೂ ತೆರಿಗೆಯನ್ನು ಪಾವತಿಸಬೇಕಿತ್ತು.
- ನಿಶ್ಚಿತ ದಿನಾಂಕದಂದು ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಿತ್ತು.

43.
- $180^0$
- ನೆಲಭಾಗವನ್ನು ಹೊರತುಪಡಿಸಿ ಕ್ರಮೀಕರಿಸಲಾಗಿದೆ.
- ಫೆಸಿಫಿಕ್ ಸಾಗರದಲ್ಲಿ ಬೇರಿಂಗ್ ಜಲಸಂಧಿಯ ಮೂಲಕ ದಕ್ಷಿಣದ ಕೆಲವು ದ್ವೀಪಗಳನ್ನು ಬಿಟ್ಟು ಕ್ರಮೀಕರಿಸಲಾಗಿದೆ.
- ಈ ರೇಖೆಯನ್ನು ದಾಟಿ ಪಶ್ಚಿಮದ ಕಡೆಗೆ ಹೋಗುವವರು ಒಂದು ದಿವಸ ಹಿಂದಕ್ಕೆ ಮಾಡುವುದು
- ಪೂರ್ವದ ಕಡೆಗೆ ಪ್ರಯಾಣಿಸುವವರು ಒಂದು ದಿವಸ ಮುಂದಕ್ಕೆ ಮಾಡಿ ಸಮಯ ಲೆಕ್ಕ ಮಾಡುವರು.

44.
- ಸೂರ್ಯ ಉತ್ತರಾರ್ಧ ಗೋಲದಲ್ಲಾಗಿರುವುದು
- ಸೂರ್ಯ ದಕ್ಷಿಣಾರ್ಧಗೋಲದಲ್ಲಾಗಿರುವುದು.

45.
- ಕೆಂಪು ಮಣ್ಣು
- ಮುರಕಲ್ಲು ಮಣ್ಣು
- ಹತ್ತಿ ಕರಿಮಣ್ಣು

46.
- ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು
- ಸತಿ ಸಹಗಮನವನ್ನು ವಿರೋಧಿಸಿದರು
- ಬ್ರಹ್ಮಸಮಾಜವನ್ನು ಸ್ಥಾಪಿಸಿದರು
- ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸಲು ಶ್ರಮಿಸಿದರು.

47. * ಹಿಮಾಚಲದ ದಕ್ಷಿಣದಲ್ಲಿದೆ (ಯಾವುದಾದರೂ ಎರಡು)

ಸರಾಸರಿ ಎತ್ತರ 1220 ಮೀಟರ್

* ಈ ಹಿಮಾಲಯದ ನದಿಗಳು ಪರ್ವತ ಶ್ರೇಣಿಯನ್ನು ಬೇಧಿಸಿಕೊಂಡು ಹರಿಯುವುದರಿಂದ ಈ ವಲಯಕ್ಕೆ ಹಲವು ಕಡೆಗಳಲ್ಲಿ ನಿರಂತರತೆಯಿಲ್ಲ.

* ಉದ್ದವಾದ ಮತ್ತು ವಿಸ್ತಾರವಾಗಿರುವ ಹಲವು ಕಣಿವೆಗಳು ಇಲ್ಲಿ ಕಂಡುಬರುತ್ತವೆ. ಇವನ್ನು ಡೂನ್ಸ್ ಎಂದು ಕರೆಯುತ್ತಾರೆ (ಉದಾ: ಡೆಹ್ರಾಡೂನ್)

(ಯಾವುದಾದರೂ ಎರಡು)

48. ಮನೆಯಿಂದಲೇ ಪ್ರಪಂಚದ ಯಾವುದೇ ಕಡೆಗೂ ಹಣ ಕಳುಹಿಸಲೂ ಬಿಲ್‌ಗಳನ್ನು ಪಾವತಿಸಲೂ ಸಾಧ್ಯವಾಗುತ್ತದೆ.

* ಕಡಿಮೆ ಸಮಯ ಸಾಕು

* ಇದಕ್ಕಿರುವ ಸೇವಾ ಶುಲ್ಕ ಕಡಿಮೆ

(ಯಾವುದಾದರೂ ಎರಡು)

49. * ತೆರಿಗೆ ಆದಾಯ

* ತೆರಿಗೆಯೇತರ ಆದಾಯ

50. • ದೇಶೀಯ ಮಟ್ಟದಲ್ಲಿ ಆಯ್ಕೆ ಮಾಡುವುದು

• ಕೇಂದ್ರ ಅಥವಾ ರಾಜ್ಯ ಸರ್ವೀಸ್‌ನಲ್ಲಿ ಆಯ್ಕೆಯಾಗುವರು

ಉದಾ : ಐ.ಎ.ಎಸ್. (Indian Administrative Service)

ಐ.ಪಿ.ಎಸ್. (Indian Police Service)

51. • ಸಾರ್ವಜನಿಕ ಸ್ಥಳದಲ್ಲಿ ಸಂಚರಿಸುವ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಧಾನ ಚಳುವಳಿಯಾಗಿತ್ತು.

• ಟಿ.ಕೆ. ಮಾಧವನ್ ರವರ ನೇತೃತ್ವದಲ್ಲಿ ನಡೆದ ಹೋರಾಟ

• ಮನ್ನತ್ ಪದ್ಮನಾಭನ್ ಸವರ್ಣ ಜಾಥವನ್ನು ಸಂಘಟಿಸಿದರು

• ವೈಕಂ ದೇವಾಲಯ ಮತ್ತು ಸುತ್ತುಮುತ್ತಲಿನ ನಿಷೇಧ ಸ್ಥಳಗಳಲ್ಲಿ ಅವರ್ಣೀಯರಿಗೂ ಸಂಚರಿಸುವ ಹಕ್ಕನ್ನು ನೀಡಲಾಯಿತು.

(ಯಾವುದಾದರೂ ಎರಡು)

52. • ಸ್ಥಳಸ್ವರೂಪ ಭೂಪಟದ ಕ್ರಮಸಂಖ್ಯೆ

• ಚಿತ್ರೀಕರಿಸಿದ ಸ್ಥಳದ ಹೆಸರು

• ಅಕ್ಷಾಂಶ ಸ್ಥಾನ

• ರೇಖಾಂಶ ಸ್ಥಾನ

- ಈಸ್ಟಿಂಗ್ಸ್
- ನೋರ್ತಿಂಗ್
- ಭೂಪಟದ ಮಾನ
- ಕೊಂಟೂರು ಅಂತರ
- ಸರ್ವೇ ನಡೆಸಿದ ವರ್ಷ
- ಪ್ರಕಟಿಸಿದ ವರ್ಷ
- ಸರ್ವೇಯ ಜವಾಬ್ದಾರಿ

(ಯಾವುದಾದರೂ ಎರಡು)

53. ಎರಡಾಗಿ ವರ್ಗೀಕರಿಸಲಾಗಿದೆ

- ಪರೋಕ್ಷ ದೂರ ಸಂವೇದನೆ
- ಪ್ರತ್ಯಕ್ಷ ದೂರ ಸಂವೇದನೆ

54. ಫಸಲ್ ಅಲಿ ಆಯೋಗದ ಅಧ್ಯಕ್ಷರಾಗಿದ್ದರು

ಎಚ್.ಎನ್. ಕುಂಜ್ರು

ಕೆ.ಎಂ. ಪಣಿಕ್ಕರ್

(ಯಾವುದಾದರೂ ಎರಡು)

55. ನೋಟುಗಳ ಮುದ್ರಣ

ಸಾಲದ ನಿಯಂತ್ರಣ

ಸರಕಾರದ ಬ್ಯಾಂಕ್

ಬ್ಯಾಂಕುಗಳ ಬ್ಯಾಂಕ್

56. **ಭಾರತೀಯ ಕಾಲಮಾನ :**

* 82½ ಡಿಗ್ರಿ ಪೂರ್ವ ರೇಖಾಂಶವು ಭಾರತದ ಪ್ರಮಾಣ ರೇಖಾಂಶವಾಗಿದೆ.
* ಪ್ರಮಾಣ ರೇಖಾಂಶದ ಸ್ಥಳೀಯ ಸಮಯವನ್ನು ಭಾರತದ ಪ್ರಮಾಣ ವೇಳೆಯಾಗಿ ಪರಿಗಣಿಸಲಾಗಿದೆ.

**ಗ್ರೀನಿಚ್ ಸಮಯ :**

* 0 ಡಿಗ್ರಿ ರೇಖಾಂಶ ರೇಖೆಯ ಸ್ಥಳೀಯ ಸಮಯವಾಗಿದೆ ಗ್ರೀನಿಚ್ ಸಮಯ.
* ಪ್ರಪಂಚದಾದ್ಯಂತ ಸಮಯವನ್ನು ನಿರ್ಣಯಿಸುವುದು ಗ್ರೀನಿಚ್ ರೇಖೆಯ ಆಧಾರದಲ್ಲಾಗಿದೆ.

57. ನೀಡಿರುವ ಬಾಹ್ಯರೇಖಾ ಚಿತ್ರದಲ್ಲಿ ದಾಖಲಿಸಲಾಗಿದೆ.

58. **ಶ್ರೇಣಿ ಆಧಾರಿತ ಸಂಸ್ಥೆ**

* ಅತ್ಯುನ್ನತ ಹಂತದಲ್ಲಿ ಓರ್ವ ಉದ್ಯೋಗಿಯೂ ಅದಕ್ಕಿಂತ ಕೆಳಗಿನ ಹಂತದಲ್ಲಿ ಹಲವಾರು ಉದ್ಯೋಗಿಗಳನ್ನು ಒಳಗೊಂಡ ರೀತಿಯನ್ನು ಶ್ರೇಣಿ ಆಧಾರಿತ ಸಂಸ್ಥೆಗಳು ಎಂದು ಕರೆಯುತ್ತಾರೆ.

**ಸ್ಥಿರತೆ**

* ಉದ್ಯೋಗಿಯಾಗಿ ಆಯ್ಕೆಯಾಗುವವರಿಗೆ ನಿಶ್ಚಿತ ಪ್ರಾಯದವರೆಗೆ ಸೇವಾವಧಿಯಿರುತ್ತದೆ. ಯೋಗ್ಯತೆಯ ಆಧಾರದಲ್ಲಿ ನೇಮಕಾತಿ.
* ಶೈಕ್ಷಣಿಕ ಯೋಗ್ಯತೆಯ ಆಧಾರದಲ್ಲಿ ಆಯ್ಕೆ ಮತ್ತು ನೇಮಕಾತಿ

**ರಾಷ್ಟ್ರೀಯ ನಿಷ್ಪಕ್ಷಪಾತ**

* ಯಾವುದೇ ರಾಜಕೀಯ ಪಕ್ಷವು ಅಧಿಕಾರಕ್ಕೆ ಬಂದರೂ ಧೋರಣೆಗಳನ್ನು ಜ್ಯಾರಿಗೊಳಿಸಲು ಉದ್ಯೋಗಿಗಳು ಜವಾಬ್ದಾರರು. ಅವರ ರಾಜಕೀಯ ಆಸಕ್ತಿಗಳು ಅವರ ಕಾರ್ಯ ನಿರ್ವಹಣೆಗೆ ಅಡ್ಡಿಯಾಗಬಾರದು. ಅಂದರೆ ಅವರು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು.

**ಪರಿಣತಿ**

* ಪ್ರತಿಯೊಬ್ಬ ಸರಕಾರಿ ಉದ್ಯೋಗಿಯು ತಾನು ನಿರ್ವಹಿಸುವ ಉದ್ಯೋಗದಲ್ಲಿ ಪರಿಣತಿಯನ್ನು ಹೊಂದಿದವನಾಗಿರಬೇಕು.

59. 6120 – ಬಾವಿ

6219 – ಕೋಟೆ

60.
* ಸಮೀಪ ಪ್ರದೇಶಗಳಿಂದ ಧಾರಾಳ ಕಚ್ಚಾವಸ್ತುಗಳ ಲಭ್ಯತೆ
* ಕಡಿಮೆ ವೆಚ್ಚದಲ್ಲಿ ಚೈತನ್ಯದ ಲಭ್ಯತೆ
* ಮುಂಬೈ ಬಂದರಿನ ಮೂಲಕ ಆಮದು ಮತ್ತು ರಫ್ತಿನ ಸಾಧ್ಯತೆ
* ಶುದ್ಧ ನೀರಿನ ಲಭ್ಯತೆ
* ಮಾನವ ಸಂಪನ್ಮೂಲದ ಲಭ್ಯತೆ

61.

| A | B |
|---|---|
| ರಾಮಕೃಷ್ಣ ಮಿಷನ್ | ಸ್ವಾಮಿ ವಿವೇಕಾನಂದ |
| ಸತ್ಯಶೋಧಕ ಸಮಾಜ | ಜ್ಯೋತಿ ಭಾ ಪುಲೆ |
| ಆಲಿಘಡ | ಸರ್ ಸಯ್ಯದ್ ಅಹಮದ್ ಖಾನ್ |
| ಆರ್ಯ ಸಮಾಜ | ಸ್ವಾಮಿ ದಯಾನಂದ ಸರಸ್ವತಿ |

62. ಪಾಲ್ಗೊಳ್ಳುವ ನಿರೀಕ್ಷಣೆ – ನಿರೀಕ್ಷಕನು ಕಲಿಕಾ ವಲಯದಿಂದ ನೇರವಾಗಿ ಮಾಹಿತಿ ಸಂಗ್ರಹಿಸುವುದು.

- ಗುಂಪಿನಲ್ಲಿ ಒಟ್ಟಿಗೆ ಇದ್ದು ವಾಸಮಾಡಿ ಅವರ ಜೀವನದ ಬಗ್ಗೆ ನೇರವಾಗಿ ತಿಳಿದುಕೊಳ್ಳುವ ರೀತಿಯಾಗಿದೆ.
- ಸ್ಪಷ್ಟವಾಗದೇ ಇರುವ ವರ್ತನೆಗಳನ್ನು ಅಧ್ಯಯನಕ್ಕೊಳಪಡಿಸಲು ಸಾಧ್ಯವಾಗುತ್ತದೆ.
  ಪಾಲ್ಗೊಳ್ಳದೇ ಇರುವ ನಿರೀಕ್ಷಣೆ – ಹೊರಗಿನಿಂದ ನಿರೀಕ್ಷಣೆ ಮಾಡುತ್ತಾನೆ

63.
- ಸರಕಾರದ ಧೋರಣೆಗಳನ್ನು ರೂಪಿಸುವುದು
- ಜನರ ಕ್ಷೇಮವನ್ನು ಖಾತರಿಪಡಿಸುವುದು
- ಜನಪರ ಸಮಸ್ಯೆಗಳಿಗೆ ಪರಿಹಾರ ಕಾಣುವುದು
- ಸರಕುಗಳು ಮತ್ತು ಸೇವೆಗಳನ್ನು ಒದಗಿಸುವುದು

64. GST - ಸರಕು ಮತ್ತು ಸೇವಾ ತೆರಿಗೆ

IGST - ಇಂಟಗ್ರೇಟೆಡ್ ಜಿ.ಎಸ್.ಟಿ.

CGST - ಸೆಂಟ್ರಲ್ ಜಿ.ಎಸ್.ಟಿ.

SGST - ಸ್ಟೇಟ್ ಜಿ.ಎಸ್.ಟಿ.

65.
- ಕೃಷಿಕರಿಗೆ ಕೃಷಿ ಭೂಮಿಯ ಹಕ್ಕು ನೀಡಲಾಯಿತು.
- ಧರ್ಮಗುರು (ಪುರೋಹಿತರು) ಗಳ ಮೇಲೆ ನಿಯಂತ್ರಣ ಹೇರಲಾಯಿತು.
- ಸಾರ್ವಜನಿಕ ಸಾಲವನ್ನು ಇಲ್ಲದಂತೆ ಮಾಡಲು ಸಿಂಕಿಂಗ್ ಫಂಡ್ ಎಂಬ ಹೆಸರಿನಲ್ಲಿ ಒಂದು ಪ್ರತ್ಯೇಕ ಫಂಡನ್ನು ರೂಪೀಕರಿಸಲಾಯಿತು.
- ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸಲಾಯಿತು.

66.
- ಮಿಲಿಯಗಟ್ಟಲೆ ಜನರು ಜೀವಹಾನಿಗೊಳಗಾದರು ಮತ್ತು ಗಾಯಗೊಂಡರು.
- ಯುರೋಪ್ ಆರ್ಥಿಕವಾಗಿ ದುರ್ಬಲವಾಯಿತು.
- ಬಡತನ, ನಿರುದ್ಯೋಗ, ಹಣದುಬ್ಬರ ಮೊದಲಾದವುಗಳು ತಲೆದೋರಿದುವು.
- ಕೃಷಿ, ಕೈಗಾರಿಕೆ, ವಾರ್ತಾ ವಿನಿಮಯ ಮೊದಲಾದವುಗಳು ಯುದ್ಧದಿಂದ ನಾಶವಾದವು.

67. ಪರಂಪರಾಗತ ಶಕ್ತಿ ಸಂಪನ್ಮೂಲಗಳು – ಕಲ್ಲಿದ್ದಲು, ಪೆಟ್ರೋಲಿಯಂ

ಪರಂಪರಾಗತವಲ್ಲದ ಶಕ್ತಿ ಸಂಪನ್ಮೂಲಗಳು – ಜೈವಿಕ ಇಂಧನಗಳು, ಸೌರ ಚೈತನ್ಯ

68. ಸಂತಾಳರ ಪ್ರತಿಭಟನೆ – ರಾಜ್‌ಮಹಲ್ ಬೆಟ್ಟಗಳು

ಮಾಪಿಳ್ಳೆ ದಂಗೆ – ಮಲಬಾರು

ಸೋರಿಕೆ ಸಿದ್ಧಾಂತ – ದಾದಾಬಾಯಿ ನವರೋಜಿ

ಭಾರತದ ಅರಾಜಕತೆಯ ಪಿತಾಮಹ – ಬಾಲಗಂಗಾಧರ ತಿಲಕ

69. • ವಸ್ತುಗಳನ್ನು ಪಡೆದುಕೊಳ್ಳುವಾಗ ರಶೀದಿಯನ್ನು ಕೇಳಿ ಪಡೆಯುವುದು.

- ಅಳತೆ ಮತ್ತು ತೂಕ ನಿಕರವಾಗಿದೆಯೆಂದು ಖಾತರಿಪಡಿಸುವುದು.
- ಪ್ಯಾಕ್ ಮಾಡಿದ ಉತ್ಪನ್ನಗಳನ್ನು ತೆಗೆಯುವಾಗ ಉತತ್ಪನ್ನದ ಹೆಸರು, ಪ್ಯಾಕ್ ಮಾಡಿದ ದಿನಾಕ, ಕಾಲಾವಧಿ, ತೂಕ ಬೆಲೆ, ನಿರ್ಮಾಪಕರ/ವಿತರಣೆಗಾರರ ವಿಳಾಸ ಎಂಬಿವು ನಮೂದಿಸಲಾಗಿದೆಯೆಂದು ಖಾತರಿಪಡಿಸುವುದು.
- ವಸ್ತುಗಳ ಗುಣಮಟ್ಟವನ್ನು ಸೂಚಿಸುವ ಚಿಹ್ನೆಗಳನ್ನು ಗಮನಿಸುವುದು.
- ತೆಗೆಯುವ ಉತ್ಪನ್ನದ ಉಪಯೋಗದ ರೀತಿ, ಕಾರ್ಯನಿರ್ವಹಣೆಯನ್ನು ಗಮನಿಸುವುದು.

70. • ನಿರ್ಬಂಧಿತ ಜವಾಬ್ದಾರಿಗಳೆಂಬುದು ರಾಷ್ಟ್ರದ ಎಲ್ಲ ಕಾಲದಲ್ಲೂ ನಿರ್ಬಂಧಿತವಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳಾಗಿವೆ.

- ನಿರ್ಬಂಧಿತ ಜವಾಬ್ದಾರಿಗಳ ನಿರ್ವಹಣೆಯಿಂದ ವಿಮುಖವಾಗಲು ರಾಷ್ಟ್ರಗಳಿಗೆ ಸಾಧ್ಯವಿಲ್ಲ
- ಈ ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ ಜನರ ಜೀವನ ಹಾಗೂ ಸಂಪತ್ತಿಗೆ ರಕ್ಷಣೆ ಇರಲಾರದು.

**ವಿವೇಚನಾತ್ಮಕ ಜವಾಬ್ದಾರಿಗಳು**

- ವಿವೇಚನಾತ್ಮಕ ಜವಾಬ್ದಾರಿಗಳೆಂದರೆ ರಾಷ್ಟ್ರದ ಆರ್ಥಿಕ ಸ್ಥಿತಿಗನುಸಾರವಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳಾಗಿವೆ. ಶಿಕ್ಷಣ, ಆರೋಗ್ಯ ಸಂರಕ್ಷಣೆ ಮೊದಲಾದ ಜವಾಬ್ದಾರಿಗಳ ನಿರ್ವಹಣೆಯಿಂದ ಜನರಿಗೆ ಉತ್ತಮವಾದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.
- ಇಂತಹ ಪ್ರಗತಿಪರವಾದ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಜ್ಯಾರಿಗೊಳಿಸುವ ರಾಷ್ಟ್ರವನ್ನು ನಾವು ಕ್ಷೇಮ ರಾಷ್ಟ್ರವೆಂದು ಕರೆಯುತ್ತೇವೆ.
- ರಾಷ್ಟ್ರದ ವಿವೇಚನಾತ್ಮಕ ಜವಾಬ್ದಾರಿಗಳ ಮಿತಿಯನ್ನು ನಿರ್ಧರಿಸಲು ಸಾಧ್ಯವಿಲ್ಲ (ಉದಾಹರಣೆ : ಆರೋಗ್ಯ ಸಂರಕ್ಷಣೆ, ವಿದ್ಯಾಭ್ಯಾಸ, ಆಹಾರ, ಸಾರಿಗೆ ಸೌಕರ್ಯ)

71. **ವಿದ್ಯಾಭ್ಯಾಸ**

ಜನರ ಸಾಮರ್ಥ್ಯ ಉತ್ತಮಗೊಳ್ಳುವುದು

↓

ತಾಂತ್ರಿಕತೆಯನ್ನು ಉಪಯೋಗಿಸುವ ತಿಳುವಳಿಕೆ ಲಭಿಸುವುದು

↓

ಉತ್ತಮ ಉದ್ಯೋಗ, ಆದಾಯ ಗಳಿಸಲು ಸಾಧ್ಯ

↓

ಜೀವನಮಟ್ಟ ಏರಿಕೆ

- ಆರೋಗ್ಯ

↓

ಕೆಲಸದ ದಿನಗಳನ್ನು ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಬಹುದು.

↓

ಪ್ರಾಕೃತಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸಬಹುದು.

↓

ಚಿಕಿತ್ಸಾ ವೆಚ್ಚವನ್ನು ಕಡಿಮೆಗೊಳಿಸುವ ಮೂಲಕ ಸರಕಾರದ ಆರ್ಥಿಕ ವೆಚ್ಚವನ್ನು ಕಡಿಮೆಗೊಳಿಸಲು ಸಾಧ್ಯ

72. - ಬ್ರಿಟೀಷ್ ಸರಕಾರದ ತೆರಿಗೆ ಆದಾಯದಲ್ಲಿ ಎರಡು ಭಾಗವೂ ಉಪ್ಪಿನ ಮೇಲೆ ಹೊರಿಸುವ ತೆರಿಗೆಯಾಗಿತ್ತು.
    - ಬಡವರಿಗೆ ಈ ತೆರಿಗೆಯು ಹೊರಲಾರದ ಭಾರವಾಗಿತ್ತು.
    - ಭಾರತೀಯ ಕಿರು ಉಪ್ಪು ಉತ್ಪಾದನಾ ಘಟಕಗಳಿಗೆ ನಿಷೇಧ ಹೇರಲಾಯಿತು.
    - ಉಪ್ಪಿನ ಬೆರೆಯನ್ನು ಮೂರು ಪಟ್ಟು ಹೆಚ್ಚಿಸಲಾಯಿತು.

73. - ಪ್ರತಿಯೊಬ್ಬರೂ ತಮ್ಮ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿರಿ.
    - ಸಾರ್ವಜನಿಕ ಹಿತಾಸಕ್ತಿಗೆ ಹಾನಿಯಾಗದಂತೆ ಸ್ವಂತ ಆಸಕ್ತಿಗಳಿಗಾಗಿ ಪ್ರಯತ್ನಿಸುವ ಅಭ್ಯಾಸ.
    - ಇತರರಿಂದ ನಿರೀಕ್ಷಿಸುವ ಬದಲಾವಣೆಗಳು ನಮ್ಮಿಂದಲೇ ಆರಂಭಿಸಬೇಕು.
    - ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಸಮಾನವಾಗಿ ಪರಿಗಣಿಸಬೇಕು.

74. - ವಿಮಾನಕ್ಕೆ ಮೇಲಕ್ಕೇರಲು ಹಾಗೂ ಕೆಳಕ್ಕಿಳಿಯಲು ವಿಶಾಲವಾದ ಸ್ಥಳದ ಅಗತ್ಯವಿದೆ
    - ಇಂಧನ ತುಂಬಿಸಲು ವಿಮಾನವನ್ನು ಆಗಾಗ ಕೆಳಗಿಳಿಸುವುದು ವೆಚ್ಚದಾಯಕವಾಗಿದೆ.
    - ವಿಮಾನದ ಅಲುಗಾಟವು ಸ್ಪಷ್ಟವಾದ ಚಿತ್ರೀಕರಣಕ್ಕೆ ಅಡ್ಡಿಯಾಗುತ್ತದೆ.
    - ವಿಸ್ತಾರವಾದ ಪ್ರದೇಶಗಳ ಚಿತ್ರೀಕರಣಕ್ಕೆ ಇದು ಪ್ರಾಯೋಗಿಕವಲ್ಲ

75. ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| ಹೋಮಿ ಜಹಾಂಗೀರ್ ಬಾಬ | ಭಾರತ ಅಣುಶಕ್ತಿ ಆಯೋಗ |
| ಎಚ್.ಎನ್. ಕುನ್ಸುರು | ಪ್ರಾಂತ್ಯ ಪುನರ್ವಿಂಗಡನಾ ಆಯೋಗ |
| ಪೋಟ್ಟಿ ಶ್ರೀರಾಮುಲು | ಆಂಧ್ರಪ್ರದೇಶ |
| ಡಾ ರಾಜೇಂದ್ರ ಪ್ರಸಾದ್ | ಸಂವಿಧಾನ ನಿರ್ಮಾಣ ಸಮಿತಿ |

76. * ವಕೀಲರು ಕೋರ್ಟು ಕಲಾಪಗಳನ್ನು ಬಹಿಷ್ಕರಿಸುವುದು

* ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವುದು

* ಚುನಾವಣೆಗಳನ್ನು ಬಹಿಷ್ಕರಿಸುವುದು

* ಬ್ರಿಟಿಷರ ಪ್ರಶಸ್ತಿಗಳನ್ನು ಹಿಂತಿರುಗಿಸುವುದು

* ತೆರಿಗೆ ನೀಡದಿರುವುದು

* ವಿದ್ಯಾರ್ಥಿಗಳು ಆಂಗ್ಲ ವಿದ್ಯಾಲಯಗಳನ್ನು ಬಹಿಷ್ಕರಿಸುವುದು

(ಯಾವುದಾದರೂ ನಾಲ್ಕನ್ನು ಬರೆಯಿರಿ)

* ಚರಕದಿಂದ ನೂಲು ತಯಾರಿಸಿ, ಖಾದಿ ವಸ್ತ್ರಗಳನ್ನು ಉತ್ಪಾದಿಸಿದರು

* ರಾಷ್ಟ್ರೀಯ ವಿದ್ಯಾಲಯಗಳನ್ನು ಆರಂಭಿಸಿದರು.

* ಹಿಂದಿ ಭಾಷೆಯನ್ನು ಪ್ರಚಾರ ಮಾಡಿದರು.

* ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳ ಭಾಗವಾಗಿತ್ತು.

(ಯಾವುದಾದರೂ ಎರಡು)

77. * ಮಾತೃದೇಶವಾದ ಇಂಗ್ಲೇಡಿನ ಸಹಾಯದೊಂದಿಗೆ ಇಂಗ್ಲೀಷಿ ವ್ಯಾಪಾರಿಗಳು ವಸಾಹತುಗಳಲ್ಲಿ ಜ್ಯಾರಿಗೊಳಿಸಿದ ಧೋರಣೆಯನ್ನು ಮರ್ಕಂಡಲಿಸಂ ಎಂದು ಕರೆಯುತ್ತಾರೆ.

* ಮರ್ಕಂಡಲಿಸ್ಟ್ ಕಾನೂನುಗಳು

78. **ಜೂನ್ 21**

ಉತ್ತರಾಯಣ ರೇಖೆಗೆ ನೇರಮೇಲೆ ಸೂರ್ಯನ ಸ್ಥಾನವಿರುತ್ತದೆ.

ಕರ್ಕಾಟಕ ಸಂಕ್ರಾಂತಿ

ಉತ್ತರಾರ್ಧ ಗೋಲದಲ್ಲಿ ಹಗಲಿನ ದೈರ್ಘ್ಯವು ಹೆಚ್ಚು.

**ಡಿಸೆಂಬರ್ 22**

ಭೂಮಧ್ಯರೇಖೆಯಿಂದ ದಕ್ಷಿಣಾರ್ಧ ಗೋಲದ ಕಡೆಗೆ ಅಯನ.

ಸೂರ್ಯನ ಸ್ಥಾನವು ದಕ್ಷಿಣಾಯನ ರೇಖೆಯ ನೇರ ಮೇಲ್ಭಾಗದಲ್ಲಿ ಇರುತ್ತದೆ.

ಮಕರ ಸಂಕ್ರಾಂತಿ

**ಮಾರ್ಚ್ 21**

ಸೂರ್ಯನ ಸ್ಥಾನವು ಭೂಮಧ್ಯ ರೇಖೆಗೆ ನೇರ ಮೇಲ್ಭಾಗದಲ್ಲಿರುತ್ತದೆ

ಸಮರಾತ್ರಿ ದಿನ

(ಯಾವುದಾದರೂ ಆರು ಪಾಯಿಂಟ್)

79. **ವಿದ್ಯಾಭ್ಯಾಸ**

ಜನರ ಸಾಮರ್ಥ್ಯ ಉತ್ತಮಗೊಳ್ಳುವುದು

↓

ತಾಂತ್ರಿಕತೆಯನ್ನು ಉಪಯೋಗಿಸುವ ತಿಳುವಳಿಕೆ ಲಭಿಸುವುದು

↓

ಉತ್ತಮ ಉದ್ಯೋಗ

↓

ಆದಾಯ ಗಳಿಸಲು ಸಾಧ್ಯ

↓

ಜೀವನಮಟ್ಟ ಏರಿಕೆ

**ಆರೋಗ್ಯ**

- ಕೆಲಸದ ದಿನಗಳನ್ನು ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಬಹುದು.
- ಪ್ರಾಕೃತಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸಬಹುದು
- ಚಿಕಿತ್ಸಾ ವೆಚ್ಚವನ್ನು ಕಡಿಮೆಗೊಳಿಸುವ ಮೂಲಕ ಸರಕಾರದ ಆರ್ಥಿಕ ವೆಚ್ಚವನ್ನು ಕಡಿಮೆಗೊಳಿಸಲು ಸಾಧ್ಯ

80. **ಕಮ್ಯುನಿಸ್ಟ್ ಧೋರಣೆಗಳು**

- ಚಿಯಾಂಗ್ ಕೈ ಶೇಕ್‌ನ ಏಕಾಧಿಪತ್ಯ
- ಮಾವೋತ್ಸೆ ತುಂಗ್
- ಕೆಂಪು ಸೇನೆ
- ಜನತಾ ಗಣರಾಜ್ಯ
- ಲೋಂಗ್ ಮಾರ್ಚ್

81. * ವಾತಾವರಣದ ವಾಯುವೂ ಭೂಮಿಯ ಮೇಲೆ ಹಾಕುವ ಭಾರವನ್ನು ವಾತಾವರಣದ ಒತ್ತಡ ಎನ್ನುವರು

* ಪಾದರಸದ ಬ್ಯಾರೋಮೀಟರ್
* ಉಷ್ಣತೆ ಹೆಚ್ಚಾಗುವಾಗ ವಾತಾವರಣದ ಒತ್ತಡವು ಕಡಿಮೆಯಾಗುತ್ತದೆ
* ಉನ್ನತಿ ಹೆಚ್ಚಾಗುವಾಗ ವಾತಾವರಣದ ಒತ್ತಡ ಕಡಿಮೆಯಾಗುತ್ತದೆ

82. **ಕೇರಳದ ರಾಷ್ಟ್ರೀಯ ಚಳುವಳಿ**

- ಮಲಬಾರ್ ಜಿಲ್ಲಾ ಕಾಂಗ್ರೆಸ್ ಪ್ರಥಮ ಸಮ್ಮೇಳನ ಸಾವಿರ 1916 ಪಾಲ್ಘಾಟ್‌ನಲ್ಲಿ ನಡೆಯಿತು.
- ಮಲಬಾರ್ ದಂಗೆ
- ಖಿಲಾಫತ್ ಚಳುವಳಿ
- ಗಾಂಧೀಜಿ ಮತ್ತು ಶೌಕತ್ ಅಲಿಯವರು 1920ರಲ್ಲಿ ಕೇರಳಕ್ಕೆ ಆಗಮಿಸಿದರು
- 1930 ರಲ್ಲಿ ನಿಯಮ ಉಲ್ಲಂಘನೆ ಚಳುವಳಿಯು ಮಲಬಾರಿನಲ್ಲಿ ಪ್ರಬಲವಾಗಿ ನಡೆಯಿತು – ಕೆ. ಕೇಳಪ್ಪ, ಅಬ್ದುಲ್ ರಹಿಮಾನ್
- ಕ್ವಿಟ್ ಇಂಡಿಯಾ ಚಳುವಳಿ – ಕಿಲರಿಯೂರು ಬಾಂಬು ಪ್ರಕರಣ

**ಕೊಚ್ಚಿ**

- ಎಲೆಕ್ಟ್ರಿಸಿಟಿ ಚಳವಳಿ

**ತಿರುವಂಕೂರ್**

- ಮಲಯಾಳಿ ಮೆಮೋರಿಯಲ್
- ಈಳವ ಮೆಮೋರಿಯಲ್
- ನಿವರ್ತನ ಆಂದೋಲನ
- ಪುನ್ನಪ್ರ ವಯಲಾರ್ ಹೋರಾಟ

83. ಉಳಿತಾಯ ಠೇವಣಿ –
- ಕಡಿಮೆ ಬಡ್ಡಿಯನ್ನು ನೀಡುತ್ತದೆ
- ನಿಬಂಧನೆಗಳಿಗನುಸಾರವಾಗಿರುವುದು
- ಹಣವನ್ನು ಹಿಂಪಡೆಯಬಹುದು
- ಪಾಸು ಪುಸ್ತಕದಲ್ಲಿ ದಾಖಲಿಸಲ್ಪಡುತ್ತದೆ

ಪ್ರಚಲಿತ ಠೇವಣಿ –
- ಒಂದೇ ದಿನದಲ್ಲಿ ಹಲವು ಬಾರಿ ಹಣವನ್ನು ಠೇವಣಿ ಇರಿಸಲು ಹಾಗೂ ಹಿಂಪಡೆಯಲು ಸಾಧ್ಯ
- ಬಡ್ಡಿ ಇರುವುದಿಲ್ಲ

ಸ್ಥಿರ ಠೇವಣಿ –
- ಒಂದು ನಿಶ್ಚಿತ ಕಾಲಾವಧಿಗೆ ನಿಕ್ಷೇಪಿಸಲು ಸಾಧ್ಯ
- ಹಣದ ಕಾಲಾವಧಿಯ ಆಧಾರದಲ್ಲಿ ಬಡ್ಡಿ ದರವನ್ನು ನಿಶ್ಚಯಿಸಲಾಗುತ್ತದೆ.

ಆವರ್ತಿತ ಠೇವಣಿ –
- ಒಂದು ನಿಶ್ಚಿತ ಮೊತ್ತವನ್ನು ನಿರ್ದಿಷ್ಟ
- ಕಾಲಾವಧಿಗೆ ಪ್ರತಿ ತಿಂಗಳು ನಿಕ್ಷೇಪಿಸುವುದು.

84. a) ಅರಬೀ ಸಮುದ್ರ ಶಾಖೆ

b) ಬಂಗಾಳ ಕೊಲ್ಲಿಯ ಶಾಖೆ

a) ಜೂನ್ ತಿಂಗಳ ಆರಂಭದೊಂದಿಗೆ ಕೇರಳದ ತೀರಕ್ಕೆ ತಲುಪುವುದು.

- ಕೇರಳದಲ್ಲಿ ಧಾರಾಕಾರ ಮಳೆಗೆ ಕಾರಣವಾಗುತ್ತದೆ
- ಕರ್ನಾಟಕ, ಗೋವಾ, ಮಹಾರಾಷ್ಟ್ರ, ಗುಜರಾತ್ ಎಂಬೀ ರಾಜ್ಯಗಳ ಪಶ್ಚಿಮ ಭಾಗಗಳಲ್ಲಿ ಮಳೆಯನ್ನುಂಟುಮಾಡುತ್ತದೆ.

b) ಬಂಗಾಳ ಕೊಲ್ಲಿಯಿಂದ ನೀರಾವಿಯನ್ನು ಹೀರಿಕೊಂಡು ಮುಂದುವರಿಯುವುದು

- ಸುಂದರವನ ನದೀಮುಖಜ ಭೂಮಿಯನ್ನು ದಾಟಿ ಪಶ್ಚಿಮ ಬಂಗಾಳವನ್ನು ಪ್ರವೇಶಿಸುತ್ತದೆ.
- ಬಿಹಾರ, ಉತ್ತರಪ್ರದೇಶ, ಪಂಜಾಬ್ ಹಾಗೂ ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ಧಾರಾಕಾರವಾದ ಮಳೆಯನ್ನು ಸುರಿಸುತ್ತದೆ.

85.
- ದೈವದತ್ತ ಸಿದ್ಧಾಂತ – ರಾಷ್ಟ್ರವು ದೇವರಿಂದ ಸೃಷ್ಟಿಸಲ್ಪಟ್ಟದ್ದಾಗಿದೆ
- ವಿಕಾಸ ಸಿದ್ಧಾಂತ – ಚರಿತ್ರೆಯ ಸೃಷ್ಟಿಯಾಗಿದೆ. ಸಮಾಜದ ವಿಕಾಸ ಪ್ರಕ್ರಿಯೆಯ ಪರಿಣಾಮವಾಗಿ ರೂಪುಗೊಂಡಿದೆ.
- ಸಾಮಾಜಿಕ ಒಪ್ಪಂದ ಸಿದ್ದಾಂತ – ಜನರು ರೂಪಿಸಿದ ಒಂದು ಒಪ್ಪಂದದ ಆಧಾರದಲ್ಲಿ ರಾಷ್ಟ್ರವು ಅಸ್ತಿತ್ವಕ್ಕೆ ಬಂತು.
- ಶಕ್ತಿ ಸಿದ್ಧಾಂತ – ಪ್ರಬಲರಾದವರು ದುರ್ಬಲರಾದವರ ಮೇಲೆ ಅಧಿಪತ್ಯವನ್ನು ಸ್ಥಾಪಿಸುವುದು.

86. ಚೆನ್ನಾರ್ ಚಳವಳಿ – ಮೇಲುಡುಗೆಯನ್ನು ಧರಿಸುವ ಹಕ್ಕಿಗಾಗಿ ದಕ್ಷಿಣ ತಿರುವಾಂಕೂರಿನ ಮಹಿಳೆಯರು ಹೋರಾಟ ನಡೆಸಿದರು.

ವೈಕಂ ಸತ್ಯಾಗ್ರಹ – 1924

– ಟಿ.ಕೆ. ಮಾಧವನ್ ನೇತೃತ್ವ

– ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವ ಸ್ವಾತಂತ್ರ್ಯಕ್ಕಾಗಿ

ಗುರುವಾಯೂರ್ ಸತ್ಯಾಗ್ರಹ– 1931

– ಕೆ. ಕೇಳಪ್ಪನ್ ನೇತೃತ್ವ

– 1936 ನವಂಬರ್ 12 ರಂದು ಕ್ಷೇತ್ರ ಪ್ರವೇಶ ಘೋಷಣೆಯನ್ನು ಹೊರಡಿಸಲಾಯಿತು.

87. ಸೈನಿಕ ಒಕ್ಕೂಟಗಳ ರೂಪೀಕರಣ

- ಅಕ್ಷಶಕ್ತಿ ಮತ್ತು ಮಿತ್ರಶಕ್ತಿ
- ತುಷ್ಟೀಕರಣ ನೀತಿ
- ಫ್ಯಾಸಿಸಂ ಮತ್ತು ನಾಝಿಸಂಗಳ ಬೆಳವಣಿಗೆ

**ಪರಿಣಾಮಗಳು**

- ಹತ್ತು ಲಕ್ಷದಷ್ಟು ಜನರು ಮೃತಪಟ್ಟರು
- ಯುರೋಪಿನ ದೇಶಗಳ ಆರ್ಥಿಕ ಸ್ಥಿತಿಯು ಅಲ್ಲೋಲ ಕಲ್ಲೋಲವಾಯಿತು
- ಯುರೋಪಿನ ದೇಶಗಳ ಜಾಗತಿಕ ಮೇಧಾವಿತ್ವವು ನಾಶವಾಯಿತು.
- ಏಷ್ಯಾ–ಆಫ್ರಿಕಾ ದೇಶಗಳ ಸ್ವಾತಂತ್ರ್ಯ ಹೋರಾಟವು ಪ್ರಬಲವಾಯಿತು.
- ಅಮೇರಿಕಾ ಮತ್ತು ಸೋವಿಯತ್ ಯೂನಿಯನ್ ಪ್ರಬಲ ಶಕ್ತಿಗಳಾಗಿ ಹೊರ ಹೊಮ್ಮಿದುವು.
- ಜಾಗತಿಕ ಶಾಂತಿಗಾಗಿ ವಿಶ್ವಸಂಸ್ಥೆಯನ್ನು ರೂಪೀಕರಿಸಲಾಯಿತು.

88. ದೂರ ಸಂವೇದನಾ ತಂತ್ರಜ್ಞಾನ ಹಾಗೂ ಇತರ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ಉಪಯೋಗಿಸಿ ಭೂಪಟಗಳು ಪಟ್ಟಿಗಳು ಗ್ರಾಫ್‌ಗಳು ಎಂಬಿವುಗಳ ಮೂಲಕ ವಿವರಿಸುವುದಕ್ಕಿರುವ ಕಂಪ್ಯೂಟರಾಧಾರಿತವಾದ ಮಾಹಿತಿ ಸಂಗ್ರಹ ವ್ಯವಸ್ಥೆಯೇ ಭೂ ಮಾಹಿತಿ ವ್ಯವಸ್ಥೆ.

**ಪ್ರಯೋಜನಗಳು**

- ಹಲವು ಮೂಲಗಳಿಂದ ಲಭಿಸುವ ಮಾಹಿತಿಗಳ ಸಂಯೋಜನೆ
- ಮಾಹಿತಿಗಳನ್ನು ಸುಲಭದಲ್ಲಿ ನವೀಕರಿಸಲು ಮತ್ತು ಹೊಸ ಮಾಹಿತಿಗಳನ್ನು ಸೇರಿಸಲು
- ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ಸ್ಥಾನೀಯ ರೀತಿಯಲ್ಲಿ ತೋರಿಸಲು
- ಸಂಗ್ರಹಿಸಿದ ಮಾಹಿತಿಗಳನ್ನುಪಯೋಗಿಸಿ ಭಾವೀ ವಿದ್ಯಮಾನಗಳ ಮತ್ತು ಪ್ರಕ್ರಿಯೆಗಳ ದೃಶ್ಯ ಮಾದರಿಗಳನ್ನು ತೋರಿಸಲು
- ಭೂಪಟ ಪಟ್ಟಿ ಗ್ರಾಫ್ ಇತ್ಯಾದಿಗಳನ್ನು ನಿರ್ಮಿಸಲು

89.
- ಡಾ. ರಾಧಾಕೃಷ್ಣನ್ ಆಯೋಗ
  - ಉದ್ಯೋಗ ಆಧಾರಿತ ವಿದ್ಯಾಸಂಸ್ಥೆಗಳನ್ನು ಆರಂಭಿಸುವುದು.
  - ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರಾಧಾನ್ಯತೆ ನೀಡಬೇಕು.
  - ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್ (ಯುಜಿಸಿ) ರೂಪಿಸಬೇಕು
- ಡಾ. ಲಕ್ಷ್ಮಣ ಸ್ವಾಮಿ ಮುದಲಿಯಾರ್ ಆಯೋಗ
  - ತ್ರಿಭಾಷಾ ಪದ್ಧತಿ ಜ್ಯಾರಿಗೊಳಿಸಬೇಕು
  - ಸೆಕೆಂಡರಿ ಮಟ್ಟದಲ್ಲಿ ವಿದ್ಯಾಭ್ಯಾಸ ಆಯೋಗ ರೂಪಿಸಬೇಕು
  - ವಿವಿದೋದ್ದೇಶ ಶಾಲೆಗಳ ಸ್ಥಾಪನೆ
  - ಅಧ್ಯಾಪಕ ತರಬೇತಿ ಸಮಿತಿ ರೂಪಿಸಬೇಕು
- ಡಾ. ಡಿ.ಎಸ್. ಕೊಥಾರಿ ಆಯೋಗ
  - 10+2+3 ಮಾದರಿಯಲ್ಲಿ ವಿದ್ಯಾಭ್ಯಾಸವನ್ನು ಜ್ಯಾರಿಗೊಳಿಸಬೇಕು
  - ಸೆಕೆಂಡರಿ ಹಂತದಲ್ಲಿ ವೃತ್ತಿ ಆಧಾರಿತ ಶಿಕ್ಷಣವನ್ನು ಜ್ಯಾರಿಗೊಳಿಸಬೇಕು
  - ನೈತಿಕ ಶಿಕ್ಷಣಕ್ಕೆ ಒತ್ತು ನೀಡಬೇಕು.

90. ಕುಟುಂಬವು ಹಿರಿಯರನ್ನು ಗೌರವಿಸಲು ಮತ್ತು ಸಾಮಾಜಿಕ ಸೇವೆಯಲ್ಲಿ ಪಾಲ್ಗೊಳ್ಳಲು ಕಲಿಸುವ ಪ್ರಾಥಮಿಕ ಸಂಸ್ಥೆಯಾಗಿದೆ. ಸದಸ್ಯರಲ್ಲಿ ಕರ್ತವ್ಯಪ್ರಜ್ಞೆ ಬೆಳೆಸುವುದರಲ್ಲೂ ಉಳಿಸುವುದರಲ್ಲೂ ಕುಟುಂಬವು ಪ್ರಧಾನ ಪಾತ್ರ ವಹಿಸುತ್ತದೆ. ಕುಟುಂಬದಿಂದ ಲಭಿಸುವ ಪ್ರೇರಣೆ ಹಾಗೂ ಪ್ರೋತ್ಸಾಹ ಉನ್ನತವಾದ ಪೌರಪ್ರಜ್ಞೆಯನ್ನು ಬೆಳೆಸುತ್ತದೆ

**ವಿದ್ಯಾಭ್ಯಾಸ**

- ವಿವಿಧ ವಿಷಯಗಳ ಕಲಿಕೆಯ ಮೂಲಕ ಲಭಿಸುವ ಜ್ಞಾನವನ್ನು ಸಮಾಜಕ್ಕೆ ಪ್ರಯೋಜನಕರವಾಗುವ ರೀತಿಯಲ್ಲಿ ಉಪಯೋಗಿಸಲು ವ್ಯಕ್ತಿಯನ್ನು ಸಜ್ಜುಗೊಳಿಸುವುದು ವಿದ್ಯಾಭ್ಯಾಸದ ಉದ್ದೇಶವಾಗಿದೆ.
- ಮೌಲ್ಯಪ್ರಜ್ಞೆ, ಸಹಿಷ್ಣುತೆ, ನಾಯಕತ್ವ ಗುಣ, ಪರಿಸರ ಪ್ರಜ್ಞೆ ಮುಂತಾದವುಗಳನ್ನು ಬೆಳೆಸಲು ವಿದ್ಯಾಭ್ಯಾಸವು ಸಹಾಯಕವಾಗಿದೆ.
- ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಮಾಜಕ್ಕೆ ಪ್ರಯೋಜನಕಾರಿಯಾದ ರೀತಿಯಲ್ಲಿ ಉಪಯೋಗಿಸಲು ವಿದ್ಯಾಭ್ಯಾಸದ ಮೂಲಕ ಸಾಧ್ಯವಾಗಬೇಕು.
- ಮೌಲ್ಯಾಧಾರಿತ ಶಿಕ್ಷಣದ ಮೂಲಕ ಪೌರಪ್ರಜ್ಞೆಯನ್ನು ಜನರೆಡೆಗೆ ತಲುಪಿಸಲು ಸಾಧ್ಯ

91.
- ಲೀಗಲ್ ಮೆಟ್ರೋಲಜಿ ಇಲಾಖೆ–ಅಳತೆ ಮತ್ತು ತೂಕದ ಗುಣಮಟ್ಟವನ್ನು (ಅಳತೆ ಮತ್ತು ತೂಕ ತಪಾಸಣಾ ಇಲಾಖೆ) ಖಾತರಿಪಡಿಸುತ್ತದೆ.
- ಆಹಾರ ಸುರಕ್ಷಾ ಇಲಾಖೆ – ಆಹಾರ ವಸ್ತುಗಳ ಗುಣಮಟ್ಟವನ್ನು ದೃಢಪಡಿಸುತ್ತದೆ.
- ಕೇಂದ್ರ ಔಷಧಿಗಳ ಬೆಲೆ ನಿಯಂತ್ರಣ – ಔಷಧಿಗಳನ್ನು ಬೆಲೆಯನ್ನು ನಿಯಂತ್ರಿಸುತ್ತದೆ.
- ಡ್ರಗ್ಸ್ ಕಂಟ್ರೋಲ್ ಇಲಾಖೆ – ಔಷಧಿಗಳ ಗುಣಮಟ್ಟವನ್ನು ಮತ್ತು ಭದ್ರತೆಯನ್ನು ಖಾತರಿಪಡಿಸುತ್ತದೆ
- ಫುಡ್ ಸೇಫ್ಟ್ ಆಂಡ್ ಸ್ಟಾಂಡರ್ಡ್ ಅಥೋರಿಟಿ ಓಫ್ ಇಂಡಿಯಾ – ಉತ್ಪಾದನೆ, ವಿತರಣೆ, ದಾಸ್ತಾನು, ಮಾರಾಟ ಆಮದು ಇತ್ಯಾದಿ ಹಂತಗಳಲ್ಲಿ ಆಹಾರ ವಸ್ತುಗಳ ಗುಣಮಟ್ಟವನ್ನು ದೃಢಪಡಿಸುತ್ತದೆ.

92.
- ಭತ್ತವನ್ನು ಬೆಳೆಸಲು ಮೆಕ್ಕಲು ಮಣ್ಣು ಅತ್ಯಂತ ಸೂಕ್ತವಾಗಿದೆ. ಹೆಚ್ಚಿನ ಉಷ್ಣತೆ ($24^0$ ಸೆಲ್ಶಿಯಸ್ ಗಿಂತ ಹೆಚ್ಚು) ಧಾರಾಳ ಮಳೆ (150 ಸೆ.ಮೀ. ಗಿಂತ ಹೆಚ್ಚು) ಭತ್ತದ ಬೆಳೆಗೆ ಅಗತ್ಯವಾಗಿದೆ.
- ನೀರಾವರಿ ಸೌಕರ್ಯವಿದ್ದರೆ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೂ ಭತ್ತವನ್ನು ಬೆಳೆಸುತ್ತಾರೆ.
- ನದೀ ಸಮತಲಗಳಲ್ಲಿ ಹಾಗೂ ಕರಾವಳಿ ಬಯಲುಗಳಲ್ಲಿ ಹೆಚ್ಚಾಗಿ ಭತ್ತದ ಕೃಷಿಯನ್ನು ಮಾಡುತ್ತಾರೆ.

**ಗೋಧಿ**

- ನೀರು ಇಂಗಿ ಹೋಗುವ ಮೆಕ್ಕಲು ಮಣ್ಣು ಗೋಧಿ ಬೆಳೆಗೆ ಉತ್ತಮವಾಗಿದೆ.
- ಪ್ರಧಾನವಾಗಿ ಮಿತೋಷ್ಣವಲಯದಲ್ಲಿ ಬೆಳೆಸುವ ಗೋಧಿ ಬೆಳೆಗೆ $10^0C$ ನಿಂದ $26^0C$ ತನಕ ಉಷ್ಣತೆ ಮತ್ತು ವಾರ್ಷಿಕ 75 ಸೆ.ಮೀ. ಮಳೆ ಅಗತ್ಯ.

**ಜೋಳ**

- ವಾರ್ಷಿಕ ಸರಾಸರಿ 75 ಸೆ.ಮೀ. ಮಳೆ ಅಗತ್ಯವಿದೆ
- ನೀರು ಇಂಗಿ ಹೋಗುವ ಫಲವತ್ತಾದ ಮಣ್ಣಿನಲ್ಲಿ ಜೋಳವನ್ನು ಬೆಳೆಸುತ್ತಾರೆ.

93. • ಶಾಶ್ವತ ಭೂ ಕಂದಾಯ ವ್ಯವಸ್ಥೆ

- ರೈತ್ ವಾರಿ ವ್ಯವಸ್ಥೆ
- ಮಹಲ್ ವಾರಿ ವ್ಯವಸ್ಥೆ

**ಶಾಶ್ವತ ಭೂಕಂದಾಯ ವ್ಯವಸ್ಥೆಯ ವಿಶೇಷತೆಗಳು**

- ಶಾಶ್ವತ ಭೂಕಂದಾಯ ವ್ಯವಸ್ಥೆಯಲ್ಲಿ ತೆರಿಗೆ ಸಂಗ್ರಹಿಸುವವರು ಜಮೀನ್ದಾರರು ಆಗಿದ್ದರು.
- ತೆರಿಗೆ ಸಂಗ್ರಹಿಸುವ ಅಧಿಕಾರವಿರುವ ಪ್ರದೇಶದ ಸಂಪೂರ್ಣ ಭೂಮಿಯ ಯಜಮಾನನು ಜಮೀನ್ದಾರನಾಗಿದ್ದನು.
- ಜಮೀನ್ದಾರರು ಭೂಮಿಯ ಯಜಮಾನರಾದಾಗ ಯಥಾರ್ಥ ಕೃಷಿಕರು ಒಕ್ಕಲುಗಳಾಗಿ ಬದಲಾದರು.
- ಬೆಳೆಯ 60% ದಷ್ಟನ್ನು ಕೃಷಿಕರು ತೆರಿಗೆಯಾಗಿ ನೀಡಬೇಕಿತ್ತು.
- ಫಸಲು ಕಡಿಮೆಯಾಗಿದ್ದರೂ ತೆರಿಗೆಯನ್ನು ಪಾವತಿಸಬೇಕಿತ್ತು.
- ನಿಶ್ಚಿತ ದಿನಾಂಕದಂದು ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಿತ್ತು. (ಹಿಂದಿನ ಕಾಲಗಳಲ್ಲಿ ಉತ್ಪನ್ನಗಳನ್ನು ಕೃಷಿಕರು ತೆರಿಗೆಯಾಗಿ ಕೊಡುತ್ತಿದ್ದರು).
- ರೈತವಾರಿ ಸಂಪ್ರದಾಯದಲ್ಲಿ ಕೃಷಿಕರಿಂದ (ರಯಟ್)ವಾಗಿ ತೆರಿಗೆ ಸಂಗ್ರಹಿಸುವ ರೀತಿ ಜಾರಿಯಲ್ಲಿತ್ತು.
- ಭೂಮಿಯ ಯಜಮಾನಿಕೆಯ ಹಕ್ಕು ಕೃಷಿಕನಿಗಾಗಿತ್ತು.
- ಅಮಿತವಾದ ತೆರಿಗೆಯ ಭಾರವು ಕೃಷಿಕರನ್ನು ದರಿದ್ರರನ್ನಾಗಿ ಮಾಡಿತು.
- ಮಾತ್ರವಲ್ಲ ತೆರಿಗೆಯ ದರವನ್ನು ಆಗಾಗ ಹೆಚ್ಚಿಸುತ್ತಿದ್ದರು.

**ಮಹಲ್ ವಾರಿ**

- ಮಹಲ್ ವಾರಿ ವ್ಯವಸ್ಥೆಯಲ್ಲಿ ಗ್ರಾಮದ ಮುಖ್ಯಸ್ಥರು ತೆರಿಗೆಯನ್ನು ಸಂಗ್ರಹಿಸುತ್ತಿದ್ದರು.
- ಈ ವ್ಯವಸ್ಥೆಯಲ್ಲಿ ತೆರಿಗೆಯ ದರವು ಅತಿ ಹೆಚ್ಚಾಗಿತ್ತು.
- ಗ್ರಾಮವನ್ನು (ಮಹಲ್) ಒಂದು ಯೂನಿಟ್ ಆಗಿ ಲೆಕ್ಕ ಹಾಕಿ ತೆರಿಗೆ ಸಂಗ್ರಹಿಸುತ್ತಿದ್ದರು.

94. • ವಾಯುಭಾರ ಪ್ರವಣತೆ

- ಕೊರಿಯೊಲಿಸ್ ಪ್ರಭಾವ
- ಘರ್ಷಣೆ
- ವಾಯುಭಾರ ಪ್ರವಣತೆ

ಭೂಮಿಯ ಮೇಲ್ಮೈಯ ವಿವಿಧ ಪ್ರದೇಶಗಳಲ್ಲಿ ವಾತಾವರಣದ ಒತ್ತಡವು ವ್ಯತ್ಯಸ್ತವಾಗಿರುತ್ತದೆ. ಈ ರೀತಿಯಲ್ಲಿ ಸಮತಲದಲ್ಲಿ ಅನುಭವಕ್ಕೆ ಬರುವ ಒತ್ತಡ ವ್ಯತ್ಯಾಸವನ್ನು ವಾಯುಭಾರ ಪ್ರವಣತೆ ಎನ್ನುತ್ತಾರೆ.

**ಕೊರಿಯೊಲಿಸ್ ಪ್ರಭಾವ**

ಭೂಮಿಯ ಭ್ರಮಣದಿಂದಾಗಿ ಭೂಮಿಯ ಮೇಲ್ಮೈಯಲ್ಲಿ ಸ್ವತಂತ್ರವಾಗಿ ಚಲಿಸುವ ಯಾವುದೇ ವಸ್ತುಗಳು ಉತ್ತರಾರ್ಧ ಗೋಲದಲ್ಲಿ ತಮ್ಮ ಸಂಚಾರ ದಿಕ್ಕಿನ ಬಲಭಾಗಕ್ಕೂ ದಕ್ಷಿಣಾರ್ಧ ಗೋಲದಲ್ಲಿ ಎಡಭಾಗಕ್ಕೂ ದಿಕ್ಪಲ್ಲಟಗೊಳ್ಳುತ್ತದೆ. ಇದನ್ನು ಕೊರಿಯೊಲಿಸ್ ಶಕ್ತಿ ಎನ್ನುತ್ತಾರೆ.

**ಘರ್ಷಣೆ**

ಸಮುದ್ರದ ಮೇಲ್ಮೈ, ಸಮತಟ್ಟಾದ ಭೂ ಪ್ರದೇಶಗಳಲ್ಲಿ ಘರ್ಷಣೆ ಕಡಿಮೆಯಾಗಿರುವುದರಿಂದ ಮಾರುತದ ವೇಗ ಹೆಚ್ಚಾಗಿರುತ್ತದೆ. ಆದರೆ ದುರ್ಗಮವಾದ ಭೂಪ್ರಕೃತಿ, ಮರಗಳು ಬೆಳೆದು ನಿಂತಿರುವ ಪ್ರದೇಶಗಳು ಮೊದಲಾದೆಡೆಗಳಲ್ಲಿ ಘರ್ಷಣೆ ಹೆಚ್ಚಾಗಿರುವುದರಿಂದ ಮಾರುತದ ವೇಗವು ಕಡಿಮೆಯಾಗಿರುತ್ತದೆ.

95. ಸಮಾಜದಲ್ಲಿ ಅಮೂಲಾಗ್ರ ಬದಲಾವಣೆ ಮಾಡಬೇಕೆಂಬುದು ಅಂದಿನ ಸಮಾಜ ಸುಧಾರಕರ ಗುರಿಯಾಗಿತ್ತು. ಅದಕ್ಕಾಗಿ ಮುಂದಿರಿಸಿದ ಬೇಡಿಕೆಗಳು

- ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕು
- ಪ್ರತಿಯೊಬ್ಬರ ಹಕ್ಕುಗಳನ್ನು ಸಂರಕ್ಷಿಸಬೇಕು
- ಮಹಿಳೆಯರ ಮೇಲಿನ ಬೇಧಭಾವಗಳನ್ನು ಕೊನೆಗಾಣಿಸಬೇಕು
- ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡಬೇಕು
- ವಿಧವಾ ವಿವಾಹವನ್ನು ಜ್ಯಾರಿಗೊಳಿಸಬೇಕು
- ಬಾಲ್ಯವಿವಾಹ, ಪುರೋಹಿತ ಮೇಧಾವಿತ್ವ ಎಂಬಿವುಗಳನ್ನು ಕೊನೆಗೊಳಿಸಬೇಕು

**ಸಾಮಾಜಿಕ ಅನಾಚಾರಗಳ ನಿಷೇಧಕ್ಕೆ ಕೈಗೊಂಡ ಕಾರ್ಯಗಳು**

- ಶಿಶು ವಿವಾಹ ಹಾಗೂ ಬಹುಪತ್ನಿತ್ವದ ನಿಷೇಧ
- ಹನ್ನೆರಡು ವರ್ಷಕ್ಕಿಂತ ಕಡಿಮೆ ಪ್ರಾಯದ ಹೆಣ್ಣು ಮಕ್ಕಳ ವಿವಾಹಕ್ಕೆ ನಿಷೇಧ
- ಹೆಣ್ಣು ಶಿಶು ಹತ್ಯೆ ನಿಷೇಧ. ಸತಿ ಸಹಗಮನ ಪದ್ಧತಿಯ ನಿಷೇಧ
- ವಿಧವಾ ಪುನರ್ವಿವಾಹ ಜ್ಯಾರಿಗೆ
- ಗುಲಾಮಗಿರಿಯ ನಿಷೇಧ

96. • ಒಂದು ದೇಶವು ಮತ್ತೊಂದು ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳ ಮೇಲೆ ಅಧಿಪತ್ಯ ಸ್ಥಾಪಿಸುವುದು ಸಾಮ್ರಾಜ್ಯಶಾಹಿತ್ವ ಎನ್ನುವರು.

- ಸಾಮ್ರಾಜ್ಯಶಾಹಿತ್ವವು ವಸಾಹತುಗಳನ್ನು ಯಾವೆಲ್ಲಾ ರೀತಿಯಲ್ಲಿ ಬಾಧಿಸಿರಬಹುದು.
- ವಸಾಹತುಗಳಲ್ಲಿ ಪರಂಪರಾಗತವಾಗಿದ್ದ ಆರ್ಥಿಕ ವ್ಯವಸ್ಥೆಯನ್ನು ನಾಶಮಾಡಿದರು.
- ಆಡಳಿತ ರೀತಿ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಬದಲಾಯಿಸಿದರು.
- ಪರಂಪರಾಗತ ಆಹಾರ ಬೆಳೆಗಳ ಬದಲು ವಾಣಿಜ್ಯ ಬೆಳೆಗಳನ್ನು ಬೆಳೆಸಲು ನಿರ್ಬಂದಿಸಿದರು.
- ಬಡತನ ಮತ್ತು ನಿರುದ್ಯೋಗವು ಹೆಚ್ಚಾಯಿತು.
- ಪ್ರಾಕೃತಿಕ ಸಂಪನ್ಮೂಲಗಳನ್ನು ನಿರಂತರವಾಗಿ ಕೊಳ್ಳೆ ಹೊಡೆದರು
- ಸ್ಥಳೀಯ ಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿ, ವಿದ್ಯಾಭ್ಯಾಸ ಮೊದಲಾದವುಗಳನ್ನು ನಾಶಮಾಡಿದರು.

97. **ಬಾಹ್ಯಾಕಾಶ ಸಂಶೋಧನೆ**

- ಭಾರತ ಬಾಹ್ಯಾಕಾಶ ಸಂಶೋಧನೆ ಸಮಿತಿಯ ರೂಪೀಕರಣ (1962)
- ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಐ.ಎಸ್.ಆರ್.ಒ) 1969
- ಭಾರತದ ಮೊದಲ ಉಪಗ್ರಹ ಉಡ್ಡಯನ ಕೇಂದ್ರ – ತುಂಬಾ
- ಆರ್ಯಭಟ – ಉಪಗ್ರಹ ಉಡ್ಡಯನ 1975
- ಬಾಹ್ಯಾಕಾಶ ಉಡ್ಡಯನ ವಾಹನಗಳನ್ನು ಅಭಿವೃದ್ಧಿಪಡಿಸಿತು
- ಉಪಗ್ರಹಗಳು ನಿರ್ಮಿಸಲು ಮತ್ತು ಉಡ್ಡಯಿಸಲು ಸಾಮರ್ಥ್ಯವುಳ್ಳ ಏಕೈಕ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ

**ಉಪಗ್ರಹಗಳನ್ನು ಅಭಿವೃದ್ಧಿಪಡಿಸುವ ಏಜೆನ್ಸಿಗಳು**

* ನೇಷನಲ್ ರಿಮೋಟ್ ಸೆನ್ಸಿಂಗ್ ಏಜೆನ್ಸಿ
* ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿ
* ಕ್ಷಿಪಣಿ ತಾಂತ್ರಿಕತೆ – ಅಗ್ನಿ, ಪೃಥ್ವಿ ಕ್ಷಿಪಣಿಗಳು
* ಅಣು ವಿಜ್ಞಾನ ರಂಗದ ಸಂಶೋಧನಂ – ಡಾ. ರಾಜಾರಾಮಣ್ಣ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
* ಚಂದ್ರಯಾನ–ಭಾರತದ ಮೊದಲ ಚಂದ್ರಯಾನ ಕಾರ್ಯಾಚರಣೆ ನಡೆಯಿತು
* ಮಗಳಯಾನ – ಭಾರತದ ಬಾಹ್ಯಾಕಾಶ ಇಲಾಖೆಯು ಮಂಗಳನಲ್ಲಿಗೆ ಕೈಗೊಂಡ ಕಾರ್ಯಾಚರಣೆ ಮಂಗಳಯಾನವಾಗಿದೆ.

**ದೇಶೀಯ ರಾಜ್ಯಗಳ ವಿಲಿನೀಕರಣ**

* ಕೇಂದ್ರಮಂತ್ರಿ ಮಂಡಲದಲ್ಲಿ ಪ್ರಾಂತ್ಯಗಳಿಗೆ ಸಂಬಂಧಿಸಿದ ಖಾತೆಯ ಜವಾಬ್ದಾರಿಯನ್ನು ಸರ್ದಾರ್ ವಲ್ಲಭ ಭಾಯ್ ಪಟೇಲರು ವಹಿಸಿದ್ದರು.
* ಸ್ಟೇಟ್ಸ್ ಡಿಪಾರ್ಟ್‌ಮೆಂಟ್‌ನ ಸೆಕ್ರೆಟರಿಯಾಗಿ ಮಲಯಾಳಿಯಾದ ಎ.ಪಿ. ಮೆನೋನ್‌ರನ್ನು ನೇಮಕಗೊಳಿಸಿದರು.
* ದೇಶೀಯ ರಾಜ್ಯಗಳು ರಕ್ಷಣೆ, ವಿದೇಶಾಂಗ, ವಾರ್ತಾ ವಿನಿಮಯಗಳ ನಿಯಂತ್ರಣವನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಬೇಕು.
* ಜನಪರ ಪ್ರತಿಭಟನೆಗಳು ಮತ್ತು ಭಾರತ ಸರಕಾರದ ಪ್ರಾಯೋಗಿಕ ಹಸ್ತಕ್ಷೇಪದಿಂದಾಗಿ ಹೆಚ್ಚಿನ ದೇಶೀಯ ರಾಜ್ಯಗಳು ವಿಲಿನೀಕರಣ ಒಪ್ಪಂದಕ್ಕೆ ಸಹಿ ಹಾಕಿ ಭಾರತ ಒಕ್ಕೂಟದಲ್ಲಿ ಸೇರಿದವು.
* ಹೈದರಾಬಾದ್, ಕಾಶ್ಮೀರ, ಜನಾಘಡ ಎಂಬೀ ದೇಶೀಯ ರಾಜ್ಯಗಳು ಭಾರತ ಒಕ್ಕೂಟದೊಂದಿಗೆ ಸೇರಲು ನಿರಾಕರಿಸಿದವು.
* ಮಾತುಕತೆ ಹಾಗೂ ಸೈನಿಕ ಕಾರ್ಯಾಚರಣೆಯ ಮೂಲಕ ಇವುಗಳನ್ನು ಭಾರತದ ಒಕ್ಕೂಟದೊಂದಿಗೆ ಸೇರ್ಪಡೆಗೊಳಿಸಲಾಯಿತು.

98.
* ಪ್ರಜಾಪ್ರಭುತ್ವ ವಿರೋಧ
* ಸಮಾಜವಾದಕ್ಕೆ ವಿರೋಧ
* ರಾಷ್ಟ್ರವನ್ನು ವೈಭವೀಕರಿಸುವುದು
* ವಂಶೀಯತೆಯನ್ನು ಎತ್ತಿ ಹಿಡಿಯುವುದು
* ಯುದ್ಧವನ್ನು ವೈಭವೀಕರಿಸುವುದು.
* ಆಕ್ರಮಣಕಾರಿ ರಾಷ್ಟ್ರೀಯತೆಯನ್ನು ಪ್ರಚಾರ ಮಾಡುವುದು
* ಭೂತಕಾಲವನ್ನು ಹೊಗಳುವುದು
* ಕಲೆ, ಸಾಹಿತ್ಯ, ಶಿಕ್ಷಣ ಮೊದಲಾದವುಗಳ ಮೂಲಕ ಆಶಯವನ್ನು ಪ್ರಚಾರಮಾಡುವುದು.
* ಸೈನಿಕ ಸ್ವೇಚ್ಛಧಿಪತ್ಯ
* ರಾಜಕೀಯ ವೈರಿಗಳನ್ನು ನಿರ್ಮೂಲನ ಮಾಡುವುದು

(ಯಾವುದಾದರೂ 8)

99.

| ಭೂಸ್ಥಿರ ಉಪಗ್ರಹಗಳು | ಸೌರಸ್ಥಿರ ಉಪಗ್ರಹಗಳು |
|---|---|
| * ಸಂಚಾರಪಥವು ಭೂಮಿಯಿಂದ ಸುಮಾರು 36000 ಕಿಲೋಮೀಟರ್ ಎತ್ತರದಲ್ಲಿದೆ.<br>* ಭೂಮಿಯ ಮೂರನೇ ಒಂದು ಭಾಗವು ನಿರೀಕ್ಷಣಾ ವ್ಯಾಪ್ತಿಯಲ್ಲಿ ಬರುತ್ತದೆ<br>* ಭೂಮಿಯ ಭ್ರಮಣ ವೇಗಕ್ಕೆ ಸಮಾನವಾದ ವೇಗದಲ್ಲಿ ಭೂಮಿಗೆ ಸುತ್ತು ಬರುವುದರಿಂದ ಯಾವಾಗಲೂ ಭೂಮಿಯ ಒಂದೇ ಪ್ರದೇಶಕ್ಕೆ ಅಭಿಮುಖವಾಗಿರುತ್ತದೆ.<br>* ಒಂದು ಪ್ರದೇಶದ ಸ್ಥಿರವಾದ ಮಾಹಿತಿ ಸಂಗ್ರಹಕ್ಕೆ ಸಾಧ್ಯವಾಗುತ್ತದೆ.<br>* ವಾರ್ತಾ ವಿನಿಮಯ ಹಾಗೂ ಹವಾಮಾನ ದಲ್ಲುಂಟಾಗುವ ಬದಲಾವಣೆಗಳನ್ನು ತಿಳಿಯಲು ಸಹಾಯಕವಾಗಿದೆ.<br>* ಭಾರತವು ಉಡಾಯಿಸುವ ಇನ್ಸಾಟ್ (INSAT) ಶ್ರೇಣಿ ಯಲ್ಲಿರುವ ಉಪಗ್ರಹಗಳು ಭೂಸ್ಥಿರ ಉಪಗ್ರಹಗಳಾಗಿವೆ. | * ಸಂಚಾರ ಪಥದ ಎತ್ತರವು ಭೂಮಿಯ ಮೇಲ್ಮೆಯಿಂದ ಸುಮಾರು 1000 ಕಿಲೋಮೀಟರಿಗಿಂತಲೂ ಕಡಿಮೆಯಾಗಿದೆ.<br>* ಭೂ ಸ್ಥಿರ ಉಪಗ್ರಹಗಳಿಗಿಂತ ಕಡಿಮೆ ನಿರೀಕ್ಷಣಾ ವ್ಯಾಪ್ತಿಯನ್ನು ಹೊಂದಿದೆ.<br>* ಒಂದು ಪ್ರದೇಶದ ಆವರ್ತಿತ ಮಾಹಿತಿ ಸಂಗ್ರಹಕ್ಕೆ ಸಾಧ್ಯವಾಗುತ್ತದೆ.<br>* ಪ್ರಾಕೃತಿಕ ಸಂಪನ್ಮೂಲಗಳು, ಭೂವಿನಿಯೋಗ, ಭೂಗರ್ಭಜಲ ಇತ್ಯಾದಿಗಳ ಮಾಹಿತಿ ಸಂಗ್ರಹಕ್ಕೆ ಉಪಯೋಗಿಸುತ್ತಾರೆ.<br>* ದೂರಸಂವೇದನೆಗೆ ಪ್ರಧಾನವಾಗಿ ಈ ಉಪಗ್ರಹಗಳನ್ನು ಬಳಸುತ್ತಾರೆ<br>* ಭಾರತವು ಉಡಾಯಿಸುವ IRS, Landset ಶ್ರೇಣಿ ಯಲ್ಲಿರುವ ಉಪಗ್ರಹಗಳು ಸೌರಸ್ಥಿರ ಉಪಗ್ರಹಗಳಾಗಿವೆ. |

100.
- ರಾಜರ ಏಕಾಧಿಪತ್ಯ
- ಸಾಮಾಜಿಕ–ಆರ್ಥಿಕ ಅಸಮತ್ವ – ಎಸ್ಟೇಟುಗಳು – ಚಿಂತಕರ ಪ್ರಭಾವ
- ಮಧ್ಯಮ ವರ್ಗದ ಬೆಳವಣಿಗೆ
- ರಾಷ್ಟ್ರೀಯತೆಯ ಉದಯ
- ಜನತೆಗೆ ಪರಮಾಧಿಕಾರ ಎಂಬ ಆಶಯ
- ದೇಶವೆಂದರೆ ಕೇವಲ ಒಂದು ಪ್ರದೇಶದಲ್ಲಿ ದೇಶದ ಜನರಾಗಿದ್ದರೆ
- ಅನಂತರ ಕಾಲದಲ್ಲಿ ಜಗತ್ತಿನಲ್ಲಿ ಸಂಭವಿಸಿದ ಎಲ್ಲ ಕ್ರಾಂತಿಗಳಿಗೆ ಪ್ರೇರಣೆ ನೀಡಿತು.
- ಫ್ಯೂಡಲ್ ವ್ಯವಸ್ಥೆಯ ಅಂತ್ಯಕ್ಕೆ ಕಾರಣವಾಯಿತು.

101. **ಅಸಹಕಾರ ಚಳವಳಿ – ವಿಶೇಷತೆಗಳು**

– ವಕೀಲರು ಕೋರ್ಟು ಕಲಾಪಗಳನ್ನು ಬಹಿಷ್ಕರಿಸುವುದು
– ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವುದು
– ಚುನಾವಣೆ ಬಹಿಷ್ಕರಿಸುವುದು
– ತೆರಿಗೆ ನೀಡದಿರುವುದು
– ವಿದ್ಯಾರ್ಥಿಗಳು ಆಂಗ್ಲ ವಿದ್ಯಾಲಯಗಳನ್ನು ಬಹಿಷ್ಕರಿಸುವುದು

**ನಾಗರಿಕ ನಿಯಮ ಉಲ್ಲಂಘನೆ**

- 1929ರಲ್ಲಿ ಲಾಹೋರಿನಲ್ಲಿ ನಡೆ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿ ಸಮ್ಮೇಳನದ ತೀರ್ಮಾನ ಬೇಡಿಕೆಗಳು

– ಉಪ್ಪಿನ ತೆರಿಗೆಯನ್ನು ತೆಗೆದು ಹಾಕುವುದು

– ಕೃಷಿಕರಿಗೆ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ ನೀಡುವುದು

– ವಿದೇಶಿ ವಸ್ತ್ರಗಳ ಆಮದು ತೆರಿಗೆಯನ್ನು ಹೆಚ್ಚಿಸುವುದು

– ರಾಜಕೀಯ ಕೈದಿಗಳನ್ನು ಬಂಧಮುಕ್ತಗೊಳಿಸುವುದು

– ಕರಾವಳಿಯಲ್ಲಿ ಹಡಗು ಸಂಚಾರ ವ್ಯವಸ್ಥೆಯನ್ನು ಆರಂಭಿಸುವುದು.

102. **ಅಸಹಕಾರ ಚಳವಳಿ**

- ವಕೀಲರು ಕೋರ್ಟು ಕಲಾಪಗಳನ್ನು ಬಹಿಷ್ಕರಿಸುವುದು.
- ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವುದು
- ಚುನಾವಣೆಗಳನ್ನು ಬಹಿಷ್ಕರಿಸುವುದು
- ಬ್ರಿಟಿಷರ ಪ್ರಶಸ್ತಿಗಳನ್ನು ಹಿಂತಿರುಗಿಸುವುದು.
- ತೆರಿಗೆ ನೀಡದಿರುವುದು
- ವಿದ್ಯಾರ್ಥಿಗಳು ಆಂಗ್ಲ ವಿದ್ಯಾಲಯಗಳನ್ನು ಬಹಿಷ್ಕರಿಸುವುದು

ಗಾಂಧೀಜಿಯ ನೇತೃತ್ವದಲ್ಲಿ ಬ್ರಿಟೀಷರು ಜ್ಯಾರಿಗೊಳಿಸಿದ ನಾಗರಿಕ ನಿಯಮ ಉಲ್ಲಂಘನೆಯನ್ನು ಆರಂಭಿಸಲು ತೀರ್ಮಾನಿಸಲಾಯಿತು.

- ಉಪ್ಪಿನ ತೆರಿಗೆಯನ್ನು ತೆಗೆದುಹಾಕುವುದು
- ಕೃಷಿಕರಿಗೆ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ ನೀಡುವುದು.
- ವಿದೇಶಿ ವಸ್ತ್ರಗಳ ಆಮದು ತೆರಿಗೆಯನ್ನು ಹೆಚ್ಚಿಸುವುದು.
- ಜೈಲಿನಲ್ಲಿರುವ ರಾಜಕೀಯ ಕೈದಿಗಳನ್ನು ಬಂಧಮುಕ್ತಗೊಳಿಸುವುದು
- ಸೈನಿಕರ ಖರ್ಚು ಹಾಗೂ ಉನ್ನತ ಉದ್ಯೋಗಸ್ಥರ ಸಂಬಳವನ್ನು ಕಡಿಮೆಗೊಳಿಸುವುದು
- ಭಾರತೀಯರ ಬಗ್ಗೆ ನಿಗಾ ವಹಿಸಲು ನಿಯೋಜಿಸಲ್ಪಟ್ಟ ಗುಪ್ತಚರ ವಿಭಾಗವನ್ನು ರದ್ದುಪಡಿಸುವುದು.
- ಕರಾವಳಿಯಲ್ಲಿ ಹಡಗು ಸಂಚಾರ ವ್ಯವಸ್ಥೆಯನ್ನು ಆರಂಭಿಸುವುದು.
- ಸಂಪೂರ್ಣ ಮಧ್ಯ ನಿಷೇಧವನ್ನು ಜ್ಯಾರಿಗೆ ತರುವುದು.

103. **ಫೆಬ್ರವರಿ ಕ್ರಾಂತಿ**

- 1917ರಲ್ಲಿ ರಷ್ಯಾದಲ್ಲಿ ಆಹಾರದ ಅಭಾವ ಉಂಟಾಯಿತು.
- ಆಹಾರಕ್ಕಾಗಿ ಲಕ್ಷಗಟ್ಟಲೆ ಮಹಿಳೆಯರು ಒಟ್ಟುಗೂಡಿ ರಸ್ತೆಗಿಳಿದರು
- ಪೆಟ್ರೋಗ್ರೇಡ್‌ನಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.
- ಎರಡನೇ ನಿಕೋಲಾಸ್ ಅಧಿಕಾರವನ್ನು ತ್ಯಜಿಸಿದನು
- ಅಲೆಕ್ಸಾಂಡರ್ ಕರೆನ್ಸಿಯ ನೇತೃತ್ವದಲ್ಲಿ ಒಂದು ತಾತ್ಕಾಲಿಕ ಸರಕಾರವು ರೂಪುಗೊಂಡಿತು.

**ಅಕ್ಟೋಬರ್ ಕ್ರಾಂತಿ**

- ತಾತ್ಕಾಲಿಕ ಸರಕಾರವನ್ನು ರಷ್ಯಾದ ಸೋವಿಯೆಟ್‌ಗಳಲ್ಲಿನ ಒಂದು ವಿಭಾಗವು ವಿರೋಧಿಸಿತು.

ವ್ಲಾಡಿಮಿರ್ ಲೆನಿನ್ ರಷ್ಯಾಕ್ಕೆ ಮರಳಿ ಬಂದನು. ಕ್ರಾಂತಿಯು ತನ್ನ ಗುರಿಯನ್ನು ತಲುಪಬೇಕಿದ್ದರೆ ಎಲ್ಲಾ ಸೋವಿಯೆಟ್‌ಗಳಿಗೂ ಅಧಿಕಾರವನ್ನು ಹಸ್ತಾಂತರಿಸಬೇಕೆಂದು ಅವನು ಒತ್ತಾಯಪಡಿಸಿದನು.

- ಒಂದನೆಯ ಜಾಗತಿಕ ಯುದ್ಧದಿಂದ ರಷ್ಯಾ ಹಿಂದಕ್ಕೆ ಸರಿಯಬೇಕು
- ಪ್ರಭುಗಳಿಂದ ಭೂಮಿಯನ್ನು ವಶಪಡಿಸಿ ಕೃಷಿಕರಿಗೆ ನೀಡಬೇಕು.
- ಕೈಗಾರಿಕೆಗಳನ್ನು ಸಾರ್ವಜನಿಕ ಸೊತ್ತೆಂದು ಘೋಷಿಸಬೇಕು.
- 1917ರಲ್ಲಿ ಬೊಲ್ಶೆವಿಕರು ತಾತ್ಕಾಲಿಕ ಸರಕಾರದ ವಿರುದ್ದ ಸಶಸ್ತ್ರ ಹೋರಾಟವನ್ನು ಆರಂಭಿಸಿದರು.

104. **ಗ್ರೀನಿಚ್ ಸಮಯ**

- ಸೊನ್ನೆ ಡಿಗ್ರಿ ರೇಖಾಂಶ ರೇಖೆಯನ್ನು ಗ್ರೀನಿಚ್ ರೇಖೆ ಎಂದು ಕರೆಯುತ್ತಾರೆ
- ಇಂಗ್ಲೆಂಡಿನ ರಾಯಲ್ ಬ್ರಿಟಿಷ್ ಖಗೋಳ ವೀಕ್ಷಣಾಲಯ ಇರುವ ಗ್ರೀನಿಚ್ ಎಂಬ ಸ್ಥಳದ ಮೂಲಕ ಹಾದುಹೋಗುವುದರಿಂದಾಗಿ ಈ ರೇಖೆಗೆ ಗ್ರೀನಿಚ್ ರೇಖೆ ಎಂದು ಹೆಸರು ನೀಡಲಾಯಿತು.
- ಪ್ರಪಂಚದಾದ್ಯಂತ ಸಮಯವನ್ನು ನಿರ್ಣಯಿಸುವುದು ಗ್ರೀನಿಚ್ ರೇಖೆಯ ಆಧಾರದಲ್ಲಿ ಆಗಿರುವುದರಿಂದ ಈ ರೇಖೆಯನ್ನು ಪ್ರಧಾನ ರೇಖಾಂಶ (Prime Meridian) ಎಂದು ಕರೆಯುತ್ತಾರೆ.
- ಗ್ರೀನಿಚ್ ರೇಖೆಯ ಸ್ಥಳೀಯ ಸಮಯವನ್ನು ಗ್ರೀನಿಚ್ ಸಮಯ (Greenwich Mean Time)ಎಂದು ಹೇಳುತ್ತಾರೆ.
- ಪ್ರಪಂಚವನ್ನು ಗ್ರೀನಿಚ್ ರೇಖೆಗೆ ಆಧಾರವಾಗಿ ಒಂದು ಗಂಟೆಯ ಸಮಯ ವ್ಯತ್ಯಾಸವಿರುವ 24 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಇವುಗಳನ್ನು ಸಮಯ ವಲಯಗಳು ಎಂದು ಕರೆಯುತ್ತಾರೆ.

**ಅಂತರಾಷ್ಟ್ರೀಯ ದಿನಾಂಕ ರೇಖೆ**

- 180 ಡಿಗ್ರಿ ರೇಖಾಂಶ ರೇಖೆಯಲ್ಲಿದೆ
- ಇದು ನೇರ ರೇಖೆಯಲ್ಲ
- ಈ ಸಮಸ್ಯೆಯ ಪರಿಹಾರಕ್ಕಾಗಿ 180 ಡಿಗ್ರಿ ರೇಖಾಂಶ ರೇಖೆ ಹಾದುಹೋಗುವ ಪ್ರದೇಶಗಳ ನೆಲ ಭಾಗವನ್ನು ಹೊರತುಪಡಿಸಿ ಕೆಲವು ಕ್ರಮೀಕರಣ ಮಾಡಿ ಗೆರೆಯನ್ನು ಬೆಳೆಯಲಾಗಿದೆ.

- ಈ ರೇಖೆಯನ್ನು ದಾಟಿ ಪಶ್ಚಿಮದ ಕಡೆಗೆ ಹೋಗುವ ಪ್ರಯಾಣಿಕರು ಕ್ಯಾಲೆಂಡರಿನಲ್ಲಿ ದಿನವನ್ನು ಒಂದು ದಿವಸ ಹಿಂದಕ್ಕೆ ಮಾಡಿ ಹಾಗೂ ಪೂರ್ವದ ಕಡೆಗೆ ಪ್ರಯಾಣಿಸುವವರು ಒಂದು ದಿವಸವನ್ನು ಮುಂದಕ್ಕೆ ಮಾಡಿ ಸಮಯವನ್ನು ಲೆಕ್ಕ ಹಾಕುತ್ತಾರೆ.

**ಭಾರತೀಯ ಕಾಲಮಾನ (IST)**

- $68^0$ ಪೂರ್ವ ರೇಖಾಂಶದಿಂದ 97 ಡಿಗ್ರಿ ಪೂರ್ವರೇಖಾಂಶದ ವರೆಗೆ ಭಾರತದ ರೇಖಾಂಶ ವ್ಯಾಪ್ತಿ ಇದೆ. ಇವುಗಳ ಸುಮಾರು ಮಧ್ಯದಲ್ಲಿರುವ 82½ ಡಿಗ್ರಿ ಪೂರ್ವರೇಖಾಂಶವನ್ನು ಭಾರತದ ಪ್ರಮಾಣ ರೇಖಾಂಶ ಎಂದು ಪರಿಗಣಿಸಲಾಗುತ್ತದೆ.
- ಈ ರೇಖಾಂಶದ ಸ್ಥಳೀಯ ಸಮಯವನ್ನು ಭಾರತದ ಪ್ರಮಾಣ ವೇಳೆ ಎಂದು ಅಂಗೀಕರಿಸಲಾಗಿದೆ. ಇದನ್ನು ಭಾರತೀಯ ಕಾಲಮಾನ (Indian Standard Time) ಎಂದು ಕರೆಯುತ್ತಾರೆ.
- ಗ್ರೀನಿಚ್ ಸಮಯ 2.00 PM ಯಾಗಿರುವಾಗ ಭಾರತದ ಕಾಲಮಾನ ಸಮಯ ರಾತ್ರಿ 7.30 ಆಗಿರುತ್ತದೆ.

  ಭಾರತೀಯ ಪ್ರಮಾಣ ರೇಖಾಂಶ : $82'30^0$ ಪೂರ್ವ.

  ರೇಖಾಂಶ ವ್ಯತ್ಯಾಸ : $82½^0$

  ಸಮಯ ವ್ಯತ್ಯಾಸ : 82½ x 4 = 330

  $$\frac{330}{60} = 5.5$$

  ಗ್ರೀನಿಚ್ ಸಮಯ ಮಧ್ಯಾಹ್ನ 2 ಗಂಟೆಯಾಗಿರುವಾಗ

  ಭಾರತದ ಪ್ರಮಾಣ ರೇಖಾಂಶ ಸಮಯ : 2pm + 5.30 ಗಂಟೆ = 7.30 pm.

* * *

Dist. Panchayath Kasaragod



DIET KASARAGOD